ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಏಪ್ರಿಲ್, ೨೦೦೧ ಸಂಚಿಕೆ ೯

ದೇಶದ ಕೊರಳಿಗೆ ಸುತ್ತಿರುವ
ಭ್ರಷ್ಟಾಚಾರದ ವಿಷಸರ್ಪ !

★

ಅಂಧಕಾರದತ್ತ ಇಪ್ಪತ್ತೊಂದನೇ ಶತಮಾನ

★

ದಲಿತರು ಹಾಗೂ ಜಾಗತೀಕರಣ

★

ಬರಲಿದೆ ಏಪ್ರಿಲ್ ಒಂದು
ನಿಜವಾಗಿಯೂ ಮೂರ್ಖರಾಗುವ ದಿನ !

★

ಅಣ್ಣೀಗೇರಿಯ ಅಣ್ಣಾ ಹಜಾರೆ
ಅಬ್ದುಲ್ ಖಾದರ್ ನಡಕಟ್ಟಿನ್

★

ಅವಗುಣಗಳ ವಿನಾಶವಲ್ಲ,
ರೂಪಾಂತರಣ ಮಾತ್ರ ಸಾಧ್ಯ

★

ಜೀವನ ಶಿಕ್ಷಣದ ಸಾಮಾಜಿಕ, ನೈತಿಕ ರೂಪ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೯

ಏಪ್ರಿಲ್ ೨೦೦೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ,

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-

ಅರ್ಧವಾರ್ಷಿಕ : ರೂ. ೫೦/-

ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :

ಜನಪದ ಸೇವಾ ಟ್ರಸ್ಟ್ (ರಿ.)

ಕಲ್ಯಾಣಿ ಬೀದಿ,

ಮೇಲುಕೋಟೆ

ಜಿಲ್ಲಾ : ಮಂಡ್ಯ. ೫೭೧ ೪೩೧.

ದೂರವಾಣಿ : ೦೮೨೩೬/೫೮೭೫೪

ಸೂರ್ಯ-ಚಂದ್ರರಿರುವ ತನಕ
ಜೊತೆ ಇರುತ್ತೇನೆಂದು
ಮಾತು ಕೊಟ್ಟನಲ್ಲ
ಮುತ್ತು ಕೊಟ್ಟಗಲ್ಲ
ಇಂದು ಮುಳ್ಳಾಯಿತಲ್ಲ!
ಪುಟಿದೆದ್ದ ಕುಣಿವ ಕಾರಂಜಿ
ನಿಂತು ಬಿಟ್ಟಿತಲ್ಲ
ಬದುಕು ಬರಡಾಯಿತಲ್ಲ!
ಉಸಿರಲ್ಲಿ ಉಸಿರಾಗಿ
ಕೋಮಲ ಭಾವಗಳ ಜತೆ ಚಕ್ಕಂದವಾಡಿ
ಮುಗ್ಧತೆಗೆ ಮೋಸಮಾಡಿ ಗೋರಿಯುಲ್ಲಿತಳ್ಳಿ
ಇನ್ನೊಂದು ಹೂ ತರಲು ಹೋದೆಯಾ?
ಆದರೆ ರಾಯಾ! ಆ ಮುಗ್ಧ ಹೂವಿನ
ಪಕಳೆಕಿತ್ತು ಹೊಸಕಿ ಹಾಕುವ ಮುನ್ನ
ಹೂತು ಹೋದ ನಿನ್ನ ಮಾತಿನ ಗುಹೆಯಲ್ಲಿ
ಹೊಕ್ಕು ನೋಡು !
ಮಾಸ್ತಿ ಕಲ್ಲುಗಳ ಲೆಕ್ಕ
ಕೊಟ್ಟು ಹೋಗು !

– ವಿಜಯಶ್ರೀ ಸಬರದ

ದೇಶದ ಕೊರಳಿಗೆ ಸುತ್ತಿರುವ ಭ್ರಷ್ಟಾಚಾರದ ವಿಷಸರ್ಪ

ತೆಹಲಕಾ ಡಾಟ್ ಕಾಮ್! ಇದು ಮಾಡಿರುವ ಒಳ್ಳೆಯ ಕೆಲಸವೇನೆಂದರೆ ಐವತ್ತುಮೂರು ವರುಷಗಳ ಸ್ವತಂತ್ರ ಭಾರತದ ಕೊರಳಿಗೆ ಇಂದು ಭ್ರಷ್ಟಾಚಾರದ ವಿಷಸರ್ಪ ಹೇಗೆ ಸುತ್ತಿಕೊಂಡಿದೆ ಎಂಬುದನ್ನು ವಾಕ್ ಮತ್ತು ದೃಶ್ಯ ಮಾಧ್ಯಮದ ಮೂಲಕ ಇಡೀ ಜಗತ್ತಿಗೇ ಪ್ರದರ್ಶಿಸಿರುವುದು. ನಮ್ಮ ದೇಶದ ಸುರಕ್ಷತೆಗೆ ಕಾರಣವಾಗಿರುವ ರಕ್ಷಣಾ ಇಲಾಖೆ ಇಂದು ಭ್ರಷ್ಟಾಚಾರದ ಕೂಪವಾಗಿದೆ. ಇದು ಎಲ್ಲ ಭಾರತೀಯರನ್ನೂ ನಾಚಿಕೆಗೆ ಒಳಪಡಿಸುವ, ಅವಮಾನಿತ ಮಾಡುವ ಸಂಗತಿಯಾಗಿದೆ. "ಭ್ರಷ್ಟಾಚಾರ ಅಂತರ್‌ರಾಷ್ಟ್ರೀಯ ಸಂಗತಿ" ಎಂದು ಇಂದಿರಾ ಗಾಂಧೀಯವರು ಹೇಳಿದ್ದ ಮಾತು ಇಂದು ನಮ್ಮ ದೇಶದ ಕುತ್ತಿಗೆಗೇ ಬಂದು ಕೂತಿದೆ. ಕೇಂದ್ರ ಸರ್ಕಾರ ಅಭದ್ರಗೊಂಡಿದೆ; ಅದರ ಕೋಟೆಯಲ್ಲಿ ಸೀಳುಬಿಟ್ಟಿದೆ; ಅದೇ ಹೊತ್ತಿಗೆ, ಮುಖ್ಯ ವಿರೋಧ ಪಕ್ಷವಾದ ಕಾಂಗ್ರೆಸ್‌ನ ಅಧ್ಯಕ್ಷೆ ಸೋನಿಯಾ ಗಾಂಧೀಯವರ ಆಪ್ತ ಕಾರ್ಯದರ್ಶಿ ಅಕ್ರಮವಾಗಿ ಕೋಟಿಗಳ ಮೊತ್ತದಲ್ಲಿ ಆಸ್ತಿ ಸಂಪಾದಿಸಿರುವ ಅಪಾದನೆಗೆ ಒಳಗಾಗಿ ಆ ಪಕ್ಷದ ನೈತಿಕ ಬಲವೇ ಕುಸಿದಿದೆ; ಭಾ.ಜ.ಪ.ದ ಅಧ್ಯಕ್ಷರಂತೂ ಪಕ್ಷದ ಹೆಸರಿನಲ್ಲಿ ಭ್ರಷ್ಟ ಹಣ ಸ್ವೀಕರಿಸಿದುದಾಗಿ ಒಪ್ಪಿಕೊಂಡು ಆ ಪಕ್ಷದ ಮುಖಕ್ಕೆ ಮಸಿಬಳಿದಿದ್ದಾರೆ. ದುರ್ದೈವದ ಸಂಗತಿಯೇನೆಂದರೆ, ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ನಮ್ಮ ಸರ್ಕಾರಗಳ ಎಲ್ಲ ಇಲಾಖೆಗಳೂ ಭ್ರಷ್ಟಾಚಾರಕ್ಕಾಗಿಯೇ ಇರುವಂಥ ಹುಲ್ಲುಗಾವುಲಗಳಾಗಿ ಬೆಳೆದುಕೊಂಡು ಬಂದಿವೆ ಮತ್ತು ಅವುಗಳಲ್ಲಿ ರಕ್ಷಣಾ ಇಲಾಖೆ ಬಹುಮುಖ್ಯವಾಗಿದೆ. ಇದಕ್ಕೆ ಪ್ರಮುಖ ಕಾರಣ ರಕ್ಷಣಾ ಇಲಾಖೆಯ ಸುತ್ತ ಇರುವ ಒಂದು ರೀತಿಯ ಗೌಪ್ಯದ ಆವರಣ. ಬೋಫೋರ್ಸ್ ಹಗರಣದ ನಂತರವಾದರೂ ರಕ್ಷಣಾ ಇಲಾಖೆ ಎಚ್ಚತ್ತುಗೊಳ್ಳಬಹುದಾಗಿತ್ತು. ಆದರೆ ಹಾಗಾಗಲಿಲ್ಲ. ರಕ್ಷಣಾ ಇಲಾಖೆ ತನ್ನನ್ನು ತಾನು ಭ್ರಷ್ಟಾಚಾರಕ್ಕೆ ಒಗ್ಗಿಸಿಕೊಂಡಿತು. ಒಟ್ಟಾರೆ ಇದರ ಪರಿಣಾಮ ನಮ್ಮ ದೇಶದ ಸೈನಿಕರ ಮೇಲೆ, ಇಡೀ ರಕ್ಷಣಾ ವ್ಯವಸ್ಥೆಯ ಮೇಲೆ ಬಹಳಷ್ಟು ಕೆಟ್ಟದಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಈ ವಿಷಯವಾಗಿ ಕೆ.ಕೆ. ವೆಂಕಟಸ್ವಾಮಿ ವಿಚಾರಣಾ ಆಯೋಗವನ್ನು ಗೊತ್ತು ಮಾಡಲಾಗಿದೆ ಮತ್ತು ನಾಲ್ಕು ತಿಂಗಳಲ್ಲಿ ವರದಿ ಸಲ್ಲಿಸುವಂತೆ ತಿಳಿಸಲಾಗಿದೆ.

ಒಟ್ಟು ಈ ಘಟನೆಯಿಂದ ನಮಗೆ ಕಂಡುಬರುವ ಅಂಶಗಳೇನೆಂದರೆ:-

೧. ನಮ್ಮ ದೇಶದ ಎಲ್ಲ ರಾಜಕಾರಣಿಗಳ ನೈತಿಕ ಮಟ್ಟ ಬಹಳವಾಗಿ ಕುಸಿದಿದೆ; ಗ್ರಾಮ ಪಂಚಾಯಿತಿಯಿಂದ ಹಿಡಿದು ಕೇಂದ್ರ ಸರ್ಕಾರದ ಉನ್ನತ ಹುದ್ದೆಗಳ ವರೆಗಿನ ಎಲ್ಲ ರಾಜಕಾರಣಿಗಳನ್ನೂ ಭ್ರಷ್ಟಚಾರದ ಘಟಸರ್ಪ ಹಿಡಿದಿದೆ;

೨. ಸಾರ್ವತ್ರಿಕ ಚುನಾವಣೆಗಳು ವರ್ಷವರ್ಷ ದುಬಾರಿಯಾಗುತ್ತಿವೆ; ದುಬಾರಿ ಚುನಾವಣೆಗಳನ್ನು ನಡೆಸಲು ಅಪಾರವಾದ ಹಣ ಬೇಕು; ರಾಜಕೀಯ ಪಕ್ಷಗಳಿಗೆ ತಮ್ಮದೇ ಆದ ನೈಜ ದುಡಿಮೆಯ ಸಂಪನ್ಮೂಲಗಳಿಲ್ಲ; ಆದ್ದರಿಂದ ಅವು ನೇರವಾಗಿ ಸಾರ್ವಜನಿಕ ಆಡಳಿತಕ್ಕೆ ಸಂಬಂಧಿಸಿದ ವ್ಯವಹಾರಗಳನ್ನು ತಮ್ಮ ಹಿತಾಸಕ್ತಿಗಾಗಿ ದುರುಪಯೋಗಪಡಿಸಿಕೊಳ್ಳುತ್ತಿವೆ.

೩. ಕಾಶ್ಮೀರದ ವಿವಾದದಿಂದಾಗಿ ಭಾರತ್-ಪಾಕ್ ಮಧ್ಯೆ ಶಸ್ತ್ರಾಸ್ತ್ರಗಳ ಸಂಗ್ರಹಣೆಯ ಪೈಪೋಟಿ ಅನಿವಾರ್ಯವೆಂಬ ಅಭಿಪ್ರಾಯವನ್ನು ಎಲ್ಲೆಡೆ ಮೂಡಿಸಿ ಭ್ರಷ್ಟಾಚಾರದ ಮೂಲಕ ಹಣ ಪಡೆಯುವ ಕ್ರಿಯೆ ನಿರಂತರ ನಡೆಯಲು ಸಾಧ್ಯವಾಗಿದೆ.

೪. ಅಧಿಕಾರಶಾಹಿಯು ರಾಜಕಾರಣಿಗಳ ಕೈಗೊಂಬೆಯಾಗಿದೆ; ಕಾರ್ಯಾಂಗ ಮತ್ತು ಶಾಸಕಾಂಗಳು ಸ್ವತಂತ್ರವಾಗಿ ಕಾರ್ಯಾಚರಣೆ ಮಾಡದೆ ಒಂದರ ಕೊಂದು ಹೆಣೆದುಕೊಂಡಿವೆ;

೫. ಜಾಗತೀಕರಣ ಮತ್ತು ಮುಕ್ತ ಮಾರುಕಟ್ಟೆಯ ನೀತಿಗಳು ಭ್ರಷ್ಟಾಚಾರದ ದಳ್ಳುರಿಗೆ ಗಾಳಿ ಬೀಸುತ್ತಿವೆ;

೬. ರಾಜ್ಯಶಕ್ತಿ ಮತ್ತು ದಂಡಶಕ್ತಿಗಳ ಎದುರು ಲೋಕಶಕ್ತಿ ತಲೆಬಗ್ಗಿಸಿ ನಿಂತುಕೊಂಡಿದೆ.

ಈ ಭ್ರಷ್ಟಾಚಾರವೆಂಬುದು ಕೇವಲ ಹಣದ ಸ್ವರೂಪದಲ್ಲೇ ಇರಬೇಕಾಗಿಲ್ಲ. ಅದು ಹತ್ತಾರು ರೂಪ ತಳೆಯುತ್ತದೆ. ಭ್ರಷ್ಟಾಚಾರದ ಕೆಲವು ಸಾಮಾನ್ಯ ಸ್ವರೂಪಗಳನ್ನು ಈ ಕೆಳಗೆ ಕಾಣಿಸಿದಂತೆ ಪಟ್ಟಿಮಾಡಬಹುದು:-

೧. ತಾನು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸದೇ ಇರುವುದು;

೨. ಪಕ್ಷಪಾತ ಮಾಡುವುದು;

೩. ಕೆಲಸ ಮಾಡುವುದರಲ್ಲಿ, ನಿರ್ಧಾರ ತೆಗೆದುಕೊಳ್ಳುವಲ್ಲಿ ನಿಧಾನಮಾಡುವುದು

೪. ಸಾಂಘಿಕ ಕಾರ್ಯನಿರ್ವಹಣೆಯ ಮನೋಭಾವವನ್ನು ಬೆಳೆಸಿಕೊಳ್ಳದೇ

ಇರುವುದು;

೫. ಮತ ಚಲಾಯಿಸುವಾಗ ಹಣ, ಹೆಂಡ, ಜಾತಿ, ಧರ್ಮ, ಸ್ವಜನ ಎಂಬ ವ್ಯಾಮೋಹಗಳಿಗೆ ಒಳಗಾಗುವುದು;

೬. ಯೋಗ್ಯರನ್ನು, ಯೋಗ್ಯತೆಯನ್ನು ಗುರುತಿಸುವಲ್ಲಿ ಮತ್ತು ಅವರಿಗೆ ಪ್ರೋತ್ಸಾಹಿಸುವಲ್ಲಿ ವಿಫಲರಾಗುವುದು;

೭. ಸಮಾಜದ ಎಲ್ಲ ಅನುಕೂಲಗಳನ್ನು ಕೇವಲ ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವುದು;

೮. ತನ್ನ ಅಧಿಕಾರವನ್ನು ದುರಪಯೋಗಪಡಿಸಿಕೊಳ್ಳುವುದು;

೯. ಉತ್ಪ್ರೇಕ್ಷೆಗೆ ಒಳಗಾಗುವುದು ಅಥವಾ ಇನ್ನೊಬ್ಬರನ್ನು ಒಳಪಡಿಸುವುದು;

೧೦. ಸಾರ್ವಜನಿಕ ಅಥವಾ ಖಾಸಗೀ ವಲಯದಲ್ಲಿ ಅಭಿಪ್ರಾಯ ಮೂಡಿಸುವುದಕ್ಕಾಗಿ ಹಿಂಸಾಚಾರ, ಬಲಾತ್ಕಾರ, ಬಲಪ್ರಯೋಗ ಮುಂತಾದ ಉಪಕ್ರಮಗಳನ್ನು ಉಪಯೋಗಿಸುವುದು.

ಹೀಗೆ ಭ್ರಷ್ಟಾಚಾರದ ಸ್ವರೂಪ ಸಮಾಜದಲ್ಲಿ ಕೆಲವೊಂದು ಸಲ ಬಹಳ ಸೂಕ್ಷ್ಮವಾಗಿ, ಕೆಲವೊಂದು ಸಲ ಸ್ಪಷ್ಟವಾಗಿ ಅನುಭವಕ್ಕೆ ಬರುತ್ತದೆ.

ನಮ್ಮದು ಪ್ರಜಾತಂತ್ರ ರಾಜ್ಯವ್ಯವಸ್ಥೆ. ರಾಜ್ಯಗಳೇ ಇಲ್ಲದೆ ಕೇವಲ ಸಹಜ ಸಾಮಾಜಿಕ ಜೀವನ ನಡೆಯುತ್ತಿದ್ದಂಥ ವೇದ–ಉಪನಿಷತ್‌ಗಳ ಕಾಲ ಒಂದಿತ್ತು; ಆ ನಂತರ ಜನಪದಗಳ ರಚನೆ, ಪಾಳ್ಯಗಾರಿಕೆ, ರಾಜತ್ವ ಇತ್ಯಾದಿ ವ್ಯವಸ್ಥೆಗಳ ಮೂಲಕ ಹಾದುಬಂದು ನಂತರ ಪರದಾಸ್ಯವನ್ನೂ ಅನುಭವಿಸಿ ಈಗ ಕಳೆದ ಐದು ದಶಕಗಳಿಂದಷ್ಟೇ ನಾವು ಪ್ರಜಾತಂತ್ರ ರಾಜ್ಯವ್ಯವಸ್ಥೆಯನ್ನು ಹೊಂದಿದ್ದೇವೆ. ಇದು ವರೆಗೆ ಪ್ರಪಂಚ ಸ್ಥೂಲವಾಗಿ ನಾಲ್ಕು ವಿಧವಾದ ರಾಜ್ಯ ಪದ್ಧತಿಗಳನ್ನು ಕಂಡಿದೆ:– ಒಂದು, ರಾಜರ ಪದ್ಧತಿ; ಎರಡು, ಸರ್ವಾಧಿಕಾರಿ ಪದ್ಧತಿ; ಮೂರು, ಕಾರ್ಮಿಕರ–ಕೂಲಿಕಾರರ ರಾಜ್ಯ ಪದ್ಧತಿ; ಕೊನೆಯಲ್ಲಿ ನಾಲ್ಕನೇಯದು, ಈಗ ಪ್ರಜಾತಂತ್ರ ರಾಜ್ಯ ಪದ್ಧತಿ. ಈ ಪ್ರಜಾತಂತ್ರ ರಾಜ್ಯ ಪದ್ಧತಿಯಲ್ಲಿ ಮೊದಲಿನ ಮೂರೂ ರಾಜ್ಯ ಪದ್ಧತಿಗಳ ಅನೇಕ ಗುಣ ವಿಶೇಷಗಳು ಉಳಿದುಕೊಂಡೇ ಬಂದಿವೆ. ನಾವು ಪ್ರಜಾತಂತ್ರದ ಹೆಸರಿನಲ್ಲಿ ಅನೇಕ ಬಾರಿ ಒಂದು ಸಣ್ಣ ಸಮೂಹದ ಮೂಲಕ ನಡೆದ ರಾಜ್ಯಭಾರವನ್ನು ಅನುಭವಿಸಿದ್ದೇವೆ; ಬಹುಮತ–ಅಲ್ಪಮತದ ಹೆಸರಿನಲ್ಲಿ ಬಹುಮತೀಯರ ದಬ್ಬಾಳಿಕೆಯನ್ನು ಅನುಭವಿಸಿದ್ದೇವೆ; ಅಧಿಕಾರಿಗಳ ಅಟ್ಟಹಾಸ ಮೆರೆದುದನ್ನು ಅನುಭವಿಸಿದ್ದೇವೆ; ನ್ಯಾಯಾಂಗವು ಆಡಳಿತ ವರ್ಗದವರ ಕೈಗೂಸಾಗಿರುವುದನ್ನು ಅನುಭವಿಸಿದ್ದೇವೆ; ಮೂಲಭೂತ ಹಕ್ಕುಗಳ ಹೆಸರಿನಲ್ಲಿ ಸ್ವಚ್ಛಂದತೆಯ

ದುಷ್ಪರಿಣಾಮವನ್ನೂ ಅನುಭವಿಸಿದ್ದೇವೆ. ಪ್ರಜಾತಂತ್ರ ವ್ಯವಸ್ಥೆ ಅನೇಕ ಒಳ್ಳೆಯ ಗುಣಲಕ್ಷಣಗಳನ್ನು ಹೊಂದಿಯೂ ಅನೇಕ ದೌರ್ಬಲ್ಯಗಳನ್ನೂ, ಲೋಪ ದೋಷಗಳನ್ನೂ ಹೊಂದಿರುವುದನ್ನು ನಾವು ಕಾಣುತ್ತಿದ್ದೇವೆ. ಪ್ರಜಾತಂತ್ರ ವ್ಯವಸ್ಥೆ ಬಹಳ ಶಿಥಿಲವಾದ ರಾಜ್ಯ ವ್ಯವಸ್ಥೆ. ಅಲ್ಲಿ ಹಕ್ಕುಗಳ ಬಗ್ಗೆ ಬಹಳ ಪ್ರಾಮುಖ್ಯತೆ ಇದೆ; ಅಷ್ಟೇ ಪ್ರಾಮುಖ್ಯತೆ ಕರ್ತವ್ಯಗಳ ಬಗ್ಗೆ ಇಲ್ಲ; ಆಡಳಿತದ ದೃಷ್ಟಿಯು ವ್ಯಕ್ತಿ ಅಭಿಮುಖವಾದದು; ಸಮಾಜ ಅಭಿಮುಖವಾದುದಲ್ಲ. ಈ ಎಲ್ಲ ಕಾರಣಗಳಿಂದ ಪ್ರಜಾತಂತ್ರ ಇರುವೆಡೆಯಲೆಲ್ಲ ಭ್ರಷ್ಟಾಚಾರ ಇದ್ದೇ ಇದೆ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ಭ್ರಷ್ಟಾಚಾರದಿಂದ ಮುಕ್ತಿ ಇಲ್ಲವೆ ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಈ ಪ್ರಶ್ನೆಗೆ ಉತ್ತರ ಸಿಗುವುದು ಕಷ್ಟ; ಸಿಕ್ಕರೂ ಅದನ್ನು ಆಚರಣೆಗೆ ತರುವುದು ಇನ್ನೂ ಕಷ್ಟ!

ಆದರೂ ಕೂಡ ನಮ್ಮ ದೇಶದ ಮಟ್ಟಿಗಾದರೂ ಈ ಕೆಳಗೆ ಕಾಣಿಸಿದ ಕೆಲವು ಪರಿಹಾರಗಳನ್ನು ಯೋಚಿಸಬಹುದಾಗಿದೆ:-

೧. ವಿಕೇಂದ್ರಿಕೃತ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಜಾರಿಗೆ ತರಬೇಕು.

೨. ಭೂಮಿಯ ಒಡೆತನ ಗ್ರಾಮ ಸಮುದಾಯಕ್ಕೆ ಸೇರಬೇಕು; ಪ್ರತ್ಯಕ್ಷವಾಗಿ ಉಳುವವನು ಮಾತ್ರ ಭೂಮಿಯ ಫಲಾನುಭವಿಯಾಗಿರಬೇಕು;

೩. ಮುಖಾಮುಖಿ ಸಮುದಾಯದ ಅಗತ್ಯಗಳನ್ನು ಪೂರೈಸುವ, ಅದರ ಜೀವನಕ್ಕನುಗುಣವಾದ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು;

೪. ಕೆಳಗಿನ ಹಂತದಲ್ಲಿ ಮಾತ್ರ ಚುನಾವಣೆ ನಡೆದು, ಮೇಲಿನ ಹಂತಗಳಲ್ಲಿ ಪರೋಕ್ಷ ಚುನಾವಣೆಗಳು ನಡೆಯಬೇಕು;

೫. ಸ್ಪಷ್ಟ ಸಿದ್ಧಾಂತಗಳಿಲ್ಲದ ರಾಜಕೀಯ ಪಕ್ಷಗಳು ಬಹಿಷ್ಕೃತವಾಗಬೇಕು.

೬. ಕಾಶ್ಮೀರ ಸಮಸ್ಯೆಯ ಭಾರ ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಬಹುವಾಗಿ ಬೀಳುತ್ತಿರುವುದರಿಂದ ಈಗ ಅಲ್ಲಿಯ ವಾಸ್ತವ ಪರಿಸ್ಥಿತಿಯ ಆಧಾರದ ಮೇಲೆ ಪಾಕಿಸ್ತಾನದ ಜೊತೆಗೆ ಒಂದು ಒಪ್ಪಂದಕ್ಕೆ ಬರಬೇಕು;

೭. ಜಾಗತೀಕರಣ, ಮುಕ್ತ ಮಾರುಕಟ್ಟೆ, ವಿಶ್ವಬ್ಯಾಂಕ್ ಸಾಲ, ವಿಶ್ವ ವಾಣಿಜ್ಯ ಒಪ್ಪಂದ ಮುಂತಾದ ವಿಷಯಗಳ ಬಗ್ಗೆ ಅತಿಯಾದ ಮೋಹಬೆಳೆಸಿಕೊಳ್ಳದೆ ಗ್ರಾಮಗಳ ಸ್ವಾವಲಂಬನೆಯ ಮೂಲಕ ರಾಷ್ಟ್ರ ಸ್ವಾವಲಂಬನೆಯ ವಿಚಾರಕ್ಕೆ ಪ್ರಾಮುಖ್ಯತೆ ಕೊಡಬೇಕು;

೮ ನೇ ಪುಟ ನೋಡಿ

ಅಂಧಕಾರದತ್ತ ಇಪ್ಪತ್ತೊಂದನೇ ಶತಮಾನ !

– ಸುರೇಂದ್ರ ಕೌಲಗಿ

ಮಾನವಕುಲದ ಇಪ್ಪತ್ತೊಂದನೇ ಶತಮಾನವು ಕತ್ತಲೆಯ ಕಡೆಗೆ ಸಾಗಿದೆ ಎಂಬುದಕ್ಕೆ ಅನೇಕ ಪುರಾವೆಗಳು ದಿನಬೆಳಗಾದರೆ ಸಿಗುತ್ತಿವೆ. ಈ ಶತಮಾನ ಪ್ರಾರಂಭವಾದಾಗ ಎಲ್ಲರೂ ಶುಭ ಹಾರೈಸುವವರೇ ಮತ್ತು ಅತ್ಯಂತ ಸುಖಮಯ ಜೀವನದ ಕನಸು ಕಾಣುವವರೇ. ಆದರೆ ಈಗ ಆಗುತ್ತಿರುವುದೇನು ? ಶುಭ ಹಾರೈಕೆಗಳು ಸುಳ್ಳಾಗುತ್ತಿವೆ, ಕನಸುಗಳು ನುಚ್ಚುನೂರಾಗುತ್ತಿವೆ. ಈ ಅನಿಸಿಕೆಗಳಿಗೆ ಪೂರಕವಾದ ಕೆಲ ಸಂಗತಿಗಳನ್ನು ನೋಡೋಣ.

ಮೊಟ್ಟಮೊದಲನೆಯದಾಗಿ ಅಫಘಾನಿಸ್ತಾನದಲ್ಲಿ ಧರ್ಮಾಂಧ ತಾಲಿಬಾನ ಕೂಟದ ಸರ್ಕಾರ ಅಲ್ಲಿಯ ಐದನೇ ಶತಮಾನಗಳಷ್ಟು ಪ್ರಾಚೀನವಾದ ಅತ್ಯಂತ ಬೃಹತ್ ಬೌದ್ಧ ವಿಗ್ರಹಗಳನ್ನು ಹಾಗೂ ಇತರ ದೇವತೆಗಳ ವಿಗ್ರಹಗಳನ್ನು ಒಡೆದು ಹಾಳು ಮಾಡಿದ್ದು, ಈ ಕೃತ್ಯವನ್ನು ಮಾಡಲು ನಿಧಾನವಾಯಿತೆಂಬ ಪಶ್ಚಾತ್ತಾಪಕ್ಕಾಗಿ ೧೦೦ ಹಸುಗಳ ಬಲಿ ಕೊಟ್ಟಿದ್ದು, ಇಂಥ ಹೇಯ ಕೆಲಸವನ್ನು ಮಾಡಬಾರದೆಂಬ ವಿಶ್ವದ ಎಲ್ಲ ರಾಷ್ಟ್ರಗಳ ಪ್ರಾರ್ಥನೆಯನ್ನು ಧಿಕ್ಕರಿಸಿದ್ದು, ಕೊನೆಯಲ್ಲಿ ಇಡೀ ವಿಶ್ವದ ಜನತೆ ಈ ದುಷ್ಕೃತ್ಯವನ್ನು ಮೂಕಪ್ರೇಕ್ಷಕರಾಗಿಯೂ, ನಿಃಸಹಾಯಕರಾಗಿಯೂ ನೋಡುತ್ತಾ ಇರಬೇಕಾಗಿ ಬಂದದ್ದು ಇಪ್ಪತ್ತೊಂದನೇ ಶತಮಾನದ ಪ್ರಪಂಚ ಬೆಳಕಿನತ್ತ ಹೋಗುವ ಬದಲು ಕತ್ತಲೆಯತ್ತ ಹೋಗುತ್ತಿದೆ ಎಂದಲ್ಲದೆ ಬೇರೇನು? ಇದು ಇಷ್ಟಕ್ಕೇ ನಿಂತಿಲ್ಲ. ಅಫಘಾನಿಸ್ತಾನದಲ್ಲಿಯ ಆ ಘಟನೆಗೆ ಪ್ರತಿಕ್ರಿಯೆಯಾಗಿ ದಿಲ್ಲಿಯಲ್ಲಿ ಇನ್ನೊಂದು ಧರ್ಮಾಂಧ ಸಂಘಟನೆಯು ಕುರಾನನ್ನು ಸುಟ್ಟುಹಾಕಿತು; ಇದಕ್ಕೆ ಪ್ರತಿಯಾಗಿ ಕಾನಪೂರ್‌ನಲ್ಲಿ ಮತೀಯ ಗಲಭೆಗಳು ನಡೆಯುತ್ತಿವೆ ಮತ್ತು ಈಗಾಗಲೇ ಹಲವಾರು ವ್ಯಕ್ತಿಗಳು ಸತ್ತಿದ್ದಾರೆ, ಪೂಜಾಸ್ಥಳಗಳು ನಾಶವಾಗಿವೆ. ತಾಲಿಬಾನರ ಅಮಾನುಷ ಕೃತ್ಯಕ್ಕೆ ಬಾಬರಿ ಮಸೀದಿಯ ಘಟನೆ ಕಾರಣವಿರಬಹುದೆಂಬ ತರ್ಕವನ್ನು ಇದಕ್ಕೆ ಜೋಡಿಸಲಾಗುತ್ತಿದೆ. ಒಟ್ಟಾರೆ ಈ ಕೃತ್ಯಗಳು ಮಾನವ ಜನಾಂಗದ ಅಧಃಪತನವನ್ನೇ ತೋರಿಸುತ್ತದೆ.

ಎರಡನೆಯ ಉದಾಹರಣೆಯಾಗಿ, ವಿಶ್ವದಾದ್ಯಂತ ದೇಶ–ದೇಶಗಳಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಘೋಷಿತ ಹಾಗೂ ಅಘೋಷಿತ ಯುದ್ಧಗಳು ಮತ್ತು ತನ್ಮೂಲಕ ಅತ್ಯಗಾಧ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿರುವ ಮಾರಕಾಸ್ತ್ರಗಳು. ಇಸ್ರೈಲ್ ಪ್ಯಾಲೆಸ್ಥಾನಗಳ ಮಧ್ಯದ ಯುದ್ಧ, ಭಾರತ್–ಪಾಕ್ ಯುದ್ಧ, ಶ್ರೀಲಂಕೆಯಲ್ಲಿ ಎಲ್.ಟಿ.ಟಿ.ಇ ಮತ್ತು ಅಲ್ಲಿಯ ಸರ್ಕಾರದ ಮಧ್ಯ

ದಲ್ಲಿಯ ಯುದ್ಧ, ಅಮೆರಿಕಾ - ಇರಾಕ್ ಮಧ್ಯದ ಯುದ್ಧ, ಚೀನಾ-ತೈವಾನ್ ಮಧ್ಯೆದ ಯುದ್ಧ, ಬಾಲ್ಕನ್ ಪ್ರದೇಶದಲ್ಲಿ ಮೆಕಡೋನಿಯಾದಲ್ಲಿ ನಡೆಯುತ್ತಿರುವ ಮತೀಯ ಯುದ್ಧ ಇತ್ಯಾದಿ. ಇಂಥ ನೂರಾರು ಪ್ರಾದೇಶಿಕ ಯುದ್ಧಗಳ ಕಾರಣದಿಂದ ಪ್ರಪಂಚದ ಪ್ರತಿಯೊಂದು ದೇಶದ ಸರಕಾರದ ಬಜೆಟ್‌ನಲ್ಲಿ ಸಿಂಹ ಪಾಲು ಶಸ್ತ್ರಾಸ್ತ್ರಗಳ ಖರೀದಿಗಾಗಿ ಅಥವಾ ಉತ್ಪಾದನೆಗಾಗಿ ಹಾಗೂ ಸೈನ್ಯದ ನಿರ್ವಹಣೆಗಾಗಿ ಖರ್ಚಾಗುತ್ತಿದೆ. ಇದರ ಪರಿಣಾಮವಾಗಿ ಪ್ರಪಂಚದ ಶೇಕಡಾ ೭೦ಕ್ಕೂ ಹೆಚ್ಚು ಭಾಗ ಹಸಿವು, ಬಡತನ, ರೋಗರುಜಿನಗಳು, ಅಜ್ಞಾನ ಇತ್ಯಾದಿ ಸಾಮಾಜಿಕ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಹಾಕಿಕೊಂಡಿದೆ.

ಮೂರನೇಯ ಉದಾಹರಣೆಯಾಗಿ, ಪ್ರಾಣಿಗಳ ತದ್ರೂಪಿಕರಣ. ಇತ್ತೀಚೆಗೆ ಮನುಷ್ಯನ ತದ್ರೂಪಿಕರಣದ ಪ್ರಕ್ರಿಯೆಯ ಪ್ರಯತ್ನಗಳೂ ನಡೆಯುತ್ತಿವೆ. ಈ ತದ್ರೂಪಿಕರಣದ ವಿಜ್ಞಾನ ಅದರ ಕ್ಷೇತ್ರದ ಮಟ್ಟಿಗೆ ಸರಿಯಿರಬಹುದು. ಆದರೆ ಆ ವಿಜ್ಞಾನದ ಸಾರ್ವತ್ರಿಕ ಉಪಯೋಗದ ಸಾಧಕ-ಬಾಧಕಗಳ ಮೇಲೆ ನಿಯಂತ್ರಣ ಹೇಗೆ, ಯಾರದು ಮುಂತಾದ ಪ್ರಶ್ನೆಗಳಿಗೆ ಉತ್ತರ ದೊರೆಯುವುದು ಕಷ್ಟ. ಅಲ್ಲದೆ, ಇದುವರೆಗೆ ವಿಜ್ಞಾನದ ದುರುಪಯೋಗದ ಪ್ರಸಂಗಗಳೇ ಹೆಚ್ಚಾಗಿ ಇರುವಾಗ ತದ್ರೂಪಿಕರಣದ ವಿಜ್ಞಾನದ ದುರ್ಬಳಕೆಯೂ ಆಗದೇ ಇರಲು ಸಾಧ್ಯವಿಲ್ಲವೆಂಬುದು ಬೆಳಕಿನಷ್ಟೇ ಸ್ಪಷ್ಟವಾಗಿದೆ. ಆದರೂ ಸಹ ಈ ಕ್ಷೇತ್ರದಲ್ಲಿ ವಿಜ್ಞಾನಿಗಳೂ, ಸರ್ಕಾರಗಳೂ ಭರದಿಂದ ಮುಂದೆ ಸಾಗುತ್ತಿವೆ. ತದ್ರೂಪೀಕರಣದ ವಿಜ್ಞಾನ ಇಪ್ಪತ್ತೊಂದನೇ ಶತಮಾನದ ಭಯಾನಕ ಸಂಶೋಧನೆ.

ನಾಲ್ಕನೆ ಉದಾಹರಣೆ, ಜಾಗತೀಕರಣ. ವಿಶ್ವಮಟ್ಟದಲ್ಲಿ ಜಾರಿಗೆ ಬರುತ್ತಿರುವ ವಾಣಿಜ್ಯ ಒಪ್ಪಂದಗಳು, ಸಾಂಸ್ಕೃತಿಕ ಒಪ್ಪಂದಗಳು, ಮಿಲಿಟರಿ ಒಪ್ಪಂದಗಳ ಕಾರಣದಿಂದ ಇಪ್ಪತ್ತೊಂದನೇ ಶತಮಾನವು ಪ್ರಗತಿಯ ಹೆಸರಿನಲ್ಲಿ ವಿಗತಿಯನ್ನು ಹೊಂದುತ್ತಿದೆ. ಪ್ರಾದೇಶಿಕ ವೈಶಿಷ್ಟ್ಯಗಳು, ಭಾಷೆಗಳು, ಸಂಸ್ಕೃತಿಗಳು, ಹಾಳಾಗಿ ಹೋಗುತ್ತಿವೆ; ಶ್ರೀಮಂತ - ಬಡವರ ಮಧ್ಯದ ಅಂತರ ಹೆಚ್ಚಾಗುತ್ತಿದೆ; ಅದರಿಂದಾಗಿ ತಮ್ಮ ಸ್ವಂತಿಕೆಗಳನ್ನು ಉಳಿಸಿಕೊಳ್ಳಲು ಸಾಮಾಜಿಕ ಘರ್ಷಣೆಗಳು ದಿನನಿತ್ಯದ ಸಂಗತಿಗಳಾಗಿವೆ.

ಐದನೇಯ ಉದಾಹರಣೆ. ಪರಿಸರದ ವಿನಾಶ. ಓಝೋನ್ ಪದರ ಹರಿದಿದೆ, ಕಾಡುಗಳಿಗೆ ಬೆಂಕಿ ಬಿದ್ದಿದೆ, ಅಂಟಾರ್ಕ್ಟಿಕ ಕರಗುತ್ತಿದೆ, ಸಮುದ್ರದ ಅಂಚಿನಲ್ಲಿರುವ ನಗರಗಳು, ಮೊರಿಶಿಯಸ್‌ನಂಥ ದೇಶಗಳು ಜಲಸಮಾಧಿಯಾಗುವ ಕಾಲ ಸಮೀಪಿಸುತ್ತಿದೆ, ನಗರಗಳಲ್ಲಿಯ ವಾಯುಮಾಲಿನ್ಯ, ಧ್ವನಿಮಾಲಿನ್ಯ

ಮುಂತಾದವುಗಳು ಹೆಚ್ಚಾಗುತ್ತಿವೆ, ನಗದಿಗಳು ಮತ್ತು ಸಮುದ್ರಗಳು ವೇಗವಾಗಿ ಮಲಿನಗೊಳ್ಳುತಿವೆ, ಇಪ್ಪತ್ತೊಂದನೇ ಶತಮಾನದ ವಿಜ್ಞಾನದ ಹೆಗ್ಗಳಿಕೆ ಈ ಎಲ್ಲ ಕ್ಷೇತ್ರಗಳಲ್ಲಿ ಸುಳ್ಳಾಗುತ್ತಿದೆ.

ಆರನೇಯ ಉದಾಹರಣೆ, ಇದುವರೆಗೂ ಮಾನವನು ತನ್ನ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಳ್ಳಲು ವಿಫಲನಾಗಿರುವುದು. ಸಾಮಾನ್ಯವಾಗಿ ಅವನ ಸಾಮಾಜಿಕ ವ್ಯವಸ್ಥೆಯ ನಿರ್ಮಾಣದಲ್ಲಿ ಸರ್ಕಾರಗಳ ರಚನೆ ಒಂದು ಪ್ರಮುಖ ಕ್ರಮ, ಆದರೆ ಈ ಮೂಲಭೂತವಾದ ಸಂಸ್ಥೆಯನ್ನೇ ನಿರ್ಮಿಸಿಕೊಳ್ಳಲು ಅವನು ವಿಫಲನಾಗಿದ್ದಾನೆ. ಇಂದು ಪ್ರಪಂಚದಾದ್ಯಂತ ಇರುವ ಸರ್ಕಾರಗಳೆಲ್ಲವೂ ಹಿಂಸೆ ಆಧಾರಿತ; ಸ್ವಾರ್ಥ ಆಧಾರಿತ, ಭುಜಬಲ ಆಧಾರಿತ, ಅಂಧ ಬಹುಮತ ಆಧಾರಿತ, ಧರ್ಮಾಂಧ ಆಧಾರಿತ ಭ್ರಷ್ಟಾಚಾರ ಆಧಾರಿತ ಇತ್ಯಾದಿ ಅಸಾಮಾಜಿಕ ಪ್ರವೃತ್ತಿ ಹಾಗೂ ಮನೋವೃತ್ತಿಗಳ ಆಧಾರದ ಮೇಲೆಯೇ ರಚಿತವಾಗಿವೆ. ಇಂದಿನ ಸರ್ಕಾರಗಳು ಕೆಲಸ ಮಾಡುತ್ತಿರುವ ವೈಖರಿಯನ್ನು ನೋಡಿದರೆ, ಈ ಪ್ರಪಂಚದಲ್ಲಿ ಮಾನವನು ಮೊದಲು ಕಾಣಿಸಿಕೊಂಡಾಗ ನಡೆದುಕೊಳ್ಳುತ್ತಿದ್ದ ಆದಿಮಾನವ ಸಂಸ್ಕೃತಿಯನ್ನೇ ಇಪ್ಪತ್ತೊಂದನೇ ಶತಮಾನದಲ್ಲಿರುವ ಮಾನವನೂ ಅನುಸರಿಸುತ್ತಿದ್ದಾನೆ. ಇಂದಿನ ಸರ್ಕಾರಗಳು ದುಷ್ಟರ, ದೈತ್ಯರ, ದಾನವರ ಕೂಟಗಳಾಗಿವೆ.

ಇಂಥ ಇನ್ನೂ ಅನೇಕಾನೇಕ ಉದಾಹರಣೆಗಳು ಅಂಗೈ ಮೇಲಿನ ಹುಣಿನಂತೆ ಸ್ಪಷ್ಟವಾಗಿ ಗೋಚರಿಸುತ್ತಿರುವಾಗ ನಮ್ಮ ಈ ಇಪ್ಪತ್ತೊಂದನೇ ಶತಮಾನವು ಅಂಧಕಾರದತ್ತ ಹೋಗುತ್ತಿದೆ ಎಂಬ ಮಾತನ್ನು ಖಂಡಿಸುವವರು ಬಹಳ ವಿರಳ. ★

ಜನಪದ ಸಂಗತಿ...................... ೨ನೇ ಪುಟದಿಂದ

೮. ಭ್ರಷ್ಟಾಚಾರದ ನಿರ್ಮೂಲನಕ್ಕೆ ಅಗತ್ಯವಾದ ಆರೋಗ್ಯಕರ ಸಾಮಾಜಿಕ ಪರಿಸರದ ನಿರ್ಮಾಣಕ್ಕಾಗಿ ಮುಕ್ತ ಮತ್ತು ದ್ವೇಷರಹಿತ ವಿಚಾರ ಗೋಷ್ಠಿಗಳು ಗ್ರಾಮಮಟ್ಟದಲ್ಲೂ, ಸಂಘ – ಸಂಸ್ಥೆಗಳ ಮಟ್ಟದಲ್ಲೂ, ಕಾರ್ಮಿಕ ಸಂಘಟನೆಗಳ ಮಟ್ಟದಲ್ಲೂ, ಚಿಕ್ಕ-ಚಿಕ್ಕ ಸಮುದಾಯಗಳಲೂ ಸಮರೋಪಾದಿಯಲ್ಲಿ ನಡೆಯಬೇಕು ಮತ್ತು ಆತ್ಮಪರೀಕ್ಷಣೆ ನಡೆಯಬೇಕು.

೯. ವೊಹರಾ ಸಮಿತಿ, ಚುನಾವಣಾ ಆಯೋಗ, ಆಡಳಿತ ಸುಧಾರಣಾ ಸಮಿತಿ ಮುಂತಾದವುಗಳ ಶಿಫಾರಸುಗಳನ್ನು ಜಾರಿಗೆ ತರಬೇಕು;

೨೬ ನೇ ಪುಟ ನೋಡಿ

ದಲಿತರು ಹಾಗೂ ಜಾಗತೀಕರಣ

-ಪ್ರೊ॥ ನಗರಗೆರೆ ರಮೇಶ್

ಲಾಭವೊಂದನ್ನೇ ಗುರಿಯಾಗಿಸಿಕೊಂಡಿರುವ ಬಂಡವಾಳಶಾಹಿಯ ಮುಂದಿನ ಹಂತವೇ ಜಾಗತೀಕರಣ. ಇದು ಮನದಟ್ಟಾದರೆ ಈ ಪ್ರಕ್ರಿಯೆಯನ್ನು ಯಾವ ಬಡ ದೇಶವೂ – ವಿಶೇಷವಾಗಿ ಅಲ್ಲಿನ ದಲಿತ ವರ್ಗಗಳು – ಬೆಂಬಲಿಸಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವದಲ್ಲಿ ಜಾಗತೀಕರಣದ ವಿರುದ್ಧ ಬಲವಾದ ವಿರೋಧದ ದನಿ ಕೇಳಿಬರುತ್ತಿದೆ. ಇತ್ತೀಚೆಗೆ ಸಿಯಟಲ್ ಮತ್ತು ಪ್ರಾಗ್‌ನಲ್ಲಿ ಮತ್ತು ವಿಶ್ವ ಆರ್ಥಿಕ ವೇದಿಕೆಗಳಲ್ಲಿ ನಡೆದ ಪ್ರತಿಭಟನೆಗಳನ್ನು ಗಮನಿಸಿದರೆ ಜಾಗತೀಕರಣವನ್ನು ಜಾರಿಮಾಡುತ್ತಿರುವ ಶಕ್ತಿಗಳಿಗೆ ಪ್ರಬಲ ಪ್ರತಿರೋಧ ತಲೆ ಎತ್ತುತ್ತಿರುವುದು ಸ್ಪಷ್ಟವಾಗುತ್ತದೆ. ಭಾರತದಲ್ಲಿ ಕೂಡ, ಜಾಗತೀಕರಣ ಪ್ರಕ್ರಿಯೆ ಪ್ರಾರಂಭವಾದ ಕಾಲದಿಂದಲೂ ಪ್ರತಿರೋಧದ ದನಿಗಳು ಕಾಣಿಸಿಕೊಂಡಿವೆ.

ಆದರೆ ಇತ್ತೀಚಿನ ಹೊಸ ಬೆಳವಣಿಗೆಯೆಂದರೆ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ದಲಿತ ವರ್ಗಗಳ ಪರವಾದ ನಿಲುವಿನಿಂದ ಜಾಗತೀಕರಣದ ಪರವಾಗಿ ದನಿಯೊಂದು ಕೇಳಿಬರುತ್ತಿದೆ. ಇದು ಸೋಜಿಗದ ಸಂಗತಿ. ಈ ದನಿಯು ಜಾಗತೀಕರಣದ ವಿರೋಧಿ ನಿಲುವನ್ನು 'ಹುಸಿ ಆದರ್ಶವಾದ' ಎಂದೋ, 'ಆಧುನಿಕತೆಯ ಲಾಭವನ್ನು ತಾವು ಪಡೆದು, ಅದನ್ನು ಕೆಳಜಾತಿ/ ವರ್ಗಗಳವರಿಗೆ ಸಿಗದಂತೆ ಹುನ್ನಾರ ನಡೆಸುವ ಮೇಲುವರ್ಗ/ ಜಾತಿಗಳವರ ಕುತ್ಸಿತ ನಿಲುವು ಎಂದೋ ವ್ಯಾಖ್ಯಾನಿಸಿರುವುದೂ ಉಂಟು. ಇಂಥ ಯಾವುದೇ ವ್ಯಾಖ್ಯಾನದಿಂದ ಜಾಗತೀಕರಣವನ್ನು ಮುಲಾಜಿಲ್ಲದೇ ವಿಮರ್ಶೆಗೆ ಒಳಪಡಿಸುವುದರಲ್ಲಿ ಯಾವ ಅಭ್ಯಂತರವೂ ಇರಲು ಸಾಧ್ಯವಿಲ್ಲ. ಆದರೆ ಈ ವ್ಯಾಖ್ಯಾನವನ್ನು ಮುಂದಿಟ್ಟು ಜಾಗತೀಕರಣದ ಪ್ರಕ್ರಿಯೆಯನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗದು ಎಂಬ ಬಗ್ಗೆಯಾದರೂ ನಮಗೆ ಸ್ಪಷ್ಟತೆ ಇರುವುದು ಅತ್ಯಗತ್ಯ.

ಕನ್ನಡದ ಪ್ರತಿಭಾವಂತ ಸೃಜನಶೀಲ ಲೇಖಕ, ಕತೆಗಾರ ಮೊಗಳ್ಳಿ ಗಣೇಶ್ ಬರೆದ "ದಲಿತರು ಮತ್ತು ಜಾಗತೀಕರಣ" ಕೃತಿಯನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯ ೧೯೯೯ ರಲ್ಲಿ ಪ್ರಕಟಿಸಿದೆ. ಈ ಕೃತಿಯು ಜಾಗತೀಕರಣ ಪ್ರಕ್ರಿಯೆಯನ್ನು ಸಾರಾಸಗಟಾಗಿ ಉತ್ತಮ ಪ್ರಕ್ರಿಯೆ ಎಂದು ಪ್ರತಿಬಿಂಬಿಸಿ, ಅಲ್ಲಲ್ಲಿ ಕೆಲವು ಕಡೆ ಜಾಗತೀಕರಣದ ಅಪಾಯಗಳ ಕಡೆ ಗಮನ

ವನ್ನು ಸೆಳೆದರೂ, ಒಟ್ಟಾರೆ ಕೃತಿಯು 'ಜಾಗತೀಕರಣವು ಭಾರತದ ದಲಿತ ವರ್ಗಗಳಿಗೆ ಒಳ್ಳೆಯದನ್ನೇ ಮಾಡುತ್ತದೆ, ಎಂಬ ವಾದವನ್ನು ಮಂಡಿಸಿದೆ.

ಜಾಗತೀಕರಣವು ಆಧುನೀಕರಣದ ಒಂದು ಹಂತ ಎಂಬ ಕಲ್ಪನೆ ಕೆಲವರಲ್ಲಿದೆ. ಆದರೆ ಇದೇ ಇನ್ನೂ ನಿಸ್ಸಂದೇಹವಾಗಿ ಸಾಬೀತಾಗಬೇಕಾಗಿರುವಾಗ ಗಣೇಶರ ಈ ಕೃತಿಯು, 'ಜಾಗತೀಕರಣವೇ ಆಧುನೀಕರಣ' ಎಂಬ ನಿಲುವನ್ನು ಪ್ರತಿಪಾದಿಸುತ್ತದೆ. "ಜಾಗತೀಕರಣದ ವಿರೋಧ ಎಂದರೆ ಆಧುನೀಕರಣದ ವಿರೋಧ; ಚಿಪ್ಪಿನಲ್ಲಿ ಹುದುಕೊಳ್ಳುವುದು" ಎಂದೆಲ್ಲಾ ಕೃತಿಯಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಬಡದೇಶಗಳಲ್ಲಿನ ದಾರಿದ್ರ್ಯವನ್ನು ನಿವಾರಿಸಲೆಂದೇ ಅಮೆರಿಕಾ ಮುಂತಾದ ಶ್ರೀಮಂತ ದೇಶಗಳು, ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಯತ್ನಿಸುತ್ತಿವೆ; ಶ್ರೀಮಂತ ದೇಶಗಳಿಂದ ಬಡ ದೇಶಗಳಿಗೆ ಹಣದ ಹೊಳೆ ಹರಿದುಬರುತ್ತದೆ; ದೇಶ-ದೇಶಗಳ ನಡುವಣ ಆರ್ಥಿಕ ಅಂತರವನ್ನು ಹೋಗಲಾಡಿಸಿ, ಸಮಾನತೆಯ ನೆಲೆಗಟ್ಟಿನ ಮೇಲೆ ಎಲ್ಲ ದೇಶಗಳನ್ನು ನಿಲ್ಲಿಸುವುದು ಜಾಗತೀಕರಣದ ಉದ್ದೇಶ ...." ಎಂಬಂಥ ವಿಲಕ್ಷಣವಾದ ಸಂಗತಿಗಳನ್ನು ಈ ಕೃತಿ ಪ್ರತಿಪಾದಿಸುತ್ತದೆ.

ಆದರೆ ವಸ್ತುಸ್ಥಿತಿಯೇನಿದೆ ಎಂಬತ್ತ ಗಣೇಶರ ಗಮನ ಹೋಗಿಲ್ಲ; ಮುಚ್ಚಿಹೋಗುತ್ತಿರುವ ಕೈಗಾರಿಕೆಗಳು, ಆತ್ಮಹತ್ಯೆಗೆ ಮೊರೆಹೋಗುತ್ತಿರುವ ರೈತರು, ವಿದ್ಯೆ, ಆರೋಗ್ಯ, ಸೌಲಭ್ಯಗಳಿಂದ ಹೆಚ್ಚು ವಂಚಿತರಾಗುತ್ತಿರುವ ಮಹಿಳೆಯರು, ಕುಬ್ಜಗೊಳ್ಳುತ್ತಾ ಹೋಗುತ್ತಿರುವ ಉದ್ಯೋಗಾವಕಾಶಗಳು, ಮೇಲಾಗಿ ಎಲ್ಲಾ ರೀತಿಯ ದಮನಕ್ಕೆ ತುತ್ತಾಗುತ್ತಿರುವ ದಲಿತ ವರ್ಗಗಳು.... ಇವ್ಯಾವುವೂ ದಲಿತರ ಗಮನವನ್ನು ಸೆಳೆದಿಲ್ಲ. ಸೃಜನಶೀಲ ಲೇಖಕರ ಸಂಕುಚಿತ ದೃಷ್ಟಿ ಸೋಜಿಗವಾದುದು. ಆಶ್ಚರ್ಯವೆಂದರೆ, ವಿಶ್ವ ಬ್ಯಾಂಕೂ ಸೇರಿದಂತೆ ವಿದೇಶಿ ಹಣಕಾಸು ಸಂಸ್ಥೆಗಳೂ ಕೂಡ ಗಣೇಶರಷ್ಟು ಉದಾರವಾಗಿ ಜಾಗತೀಕರಣ ಪರ ನಿಲುವು ತಾಳಿದಂತಿಲ್ಲ. ಆದ್ದರಿಂದಲೇ ಜಾಗತೀಕರಣದ ಪ್ರಕ್ರಿಯೆಯಲ್ಲಿ ಆಗಿರುವ ಕೆಲವು ಅನಾಹುತಗಳನ್ನು ವಿಶ್ವಬ್ಯಾಂಕೇ ತನ್ನ ಇತ್ತೀಚಿನ ವರದಿಯಲ್ಲಿ ಬಯಲುಗೊಳಿಸಿದೆ. ನಮ್ಮ ಸರ್ಕಾರಗಳೂ ನಾಲಗೆ ತುದಿಯಿಂದಲಾದರೂ, 'ಜಾಗತೀಕರಣದಿಂದಾಗಿ ಬಡವರ ಬಡತನ ಹೆಚ್ಚಾಗಿದೆ; ಜಾಗತೀಕರಣಕ್ಕೆ ಮಾನವೀಯ ಮುಖ ಇರತಕ್ಕದ್ದು' ಎಂದು ಹೇಳುತ್ತಿವೆ.

ಜಾಗತೀಕರಣ ವಿರೋಧಿಸುವುದೆಂದರೆ ವಿಶ್ವದಿಂದ ದೂರ ಉಳಿಯುವುದು

ಎಂಬ ತಿಳುವಳಿಕೆ ಬಹುಜನರಲ್ಲಿದೆ. ಇದಕ್ಕೆ ಲೇಖಕರು ಅಪವಾದವಲ್ಲ. 'ಯಾವುದೇ ದೇಶ ತನ್ನ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡೂ, ಸ್ವಾವಲಂಬನೆ ಸಾಧಿಸಿಕೊಂಡೂ ವಿಶ್ವದ ಜೊತೆ ಸೋದರತೆಯಿಂದ, ಸಮಾನತೆಯಿಂದ ಇರಲು ಸಾಧ್ಯ' ಎಂಬ ವಾಸ್ತವ ನಮಗೆ ಮನವರಿಕೆಯಾಗಬೇಕು. ಇದೇ ಅಂತರರಾಷ್ಟ್ರೀಯತೆ. ಆದರೆ ಜಾಗತೀಕರಣವಾದಿಗಳಿಗೆ ಈ ಪದ ಕೂಡ ಹಳೆಯದಾಗಿ, ಅಸಂಗತವಾಗಿ ಕಾಣುತ್ತಿದೆ. ಇದು ಸಹಜವೇ ಆಗಿದೆ. ಏಕೆಂದರೆ ಇಂಥವರು ಅರಣ್ಯ ನ್ಯಾಯವನ್ನು ಸರ್ವರ ಹಿತ ಎಂದು ಭ್ರಮಿಸುತ್ತಾರೆ. ಜಾಗತೀಕರಣ ಮುಂದಿಡುವ ಭ್ರಮೆಗಳಿಂದಾಗಿ ಕುರುಡುತನ ಇಂಥವರನ್ನು ಆವರಿಸಿದೆ. ಹಾಗಾಗೇ ಇಂಥವರಿಗೆ ಸಮಾನತೆ, ಸ್ವಾವಲಂಬನೆಗಳ ಆಶಯವನ್ನು ಹೊತ್ತ ಸಮಾಜವಾದವಾಗಲೀ, ಸಾಮ್ಯವಾದವಾಗಲೀ ಅನಿಷ್ಟಗಳೆಂಬಂತೆಯೇ ತೋರುವುವು.

ಜಾಗತೀಕರಣದ ಬಗ್ಗೆ ವಾಸ್ತವವಾದಿ ನೆಲೆಯಿಂದ ಚಿಂತನೆ ನಡೆಯಬೇಕಾಗಿದೆ. ಅರೆ ಮಾಹಿತಿಗಳು, ಭ್ರಮೆಗಳು, ಪ್ರತೀಕಾರ ಭಾವನೆಗಳು ನಮ್ಮ ಮೇಲೆ ಸವಾರಿ ಮಾಡದಿರಲಿ. ಯಾವುದೂ ಅನಿವಾರ್ಯವಲ್ಲ ಎಂಬ ಸತ್ಯ ನಮಗೆ ಮನಗಾಣಲಿ. ಜಾಗತೀಕರದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಹತಾಶ ಭಾವನೆ ನಮ್ಮನ್ನು ಮುತ್ತಿಕೊಳ್ಳದಿರಲಿ. ನಮ್ಮ ಚಿಂತನೆ, ಶಕ್ತಿ, ಸಾಮರ್ಥ್ಯಗಳ ಮೇಲೆ ಅಪನಂಬಿಕೆ ಮೂಡದಿರಲಿ. ಸಮಚಿತ್ತದಿಂದ ಜಾಗತೀಕರಣದ ಬಗ್ಗೆ ಮುಕ್ತ ವ್ಯಾಪಕ ಹಾಗೂ ಪರಿಣಾಮಕಾರಿ ಚರ್ಚೆ ನಡೆಸುವುದು ನಮಗೆ ಸಾಧ್ಯವಾಗಲಿ. ಜಾಗತೀಕರಣವನ್ನು ದಲಿತರು, ಶ್ರಮಜೀವಿಗಳು, ಮಹಿಳೆಯರು, ರೈತರು, ಆದಿವಾಸಿಗಳು ಕಾರ್ಮಿಕರು ಹೀಗೆ ಎಲ್ಲಾ ವರ್ಗಗಳು ಒಂದುಗೂಡಿ ಎದುರಿಸಬೇಕಾಗಿದೆ ಎಂಬುದನ್ನು ಮರೆಯದಿರೋಣ; ಆ ದಿಸೆಯಲ್ಲಿ ನಮ್ಮ ಸಾಮೂಹಿಕ ಚಿಂತನೆ ಹಾಗೂ ಕ್ರಿಯಾಶೀಲ ಚಟುವಟಿಕೆಗಳು ನಡೆಯುವಂತಾಗಲಿ. ★ (ಮುಕ್ತ ಸಮಾಜವಾದಿ ಮಾತುಕತೆಯ ಸಾಭಾರ)

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.
ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಬರಲಿದೆ ಏಪ್ರಿಲ್ ಒಂದು
ನಿಜವಾಗಿಯೂ ಮೂರ್ಖರಾಗುವ ದಿನ!

–ಅರ್ಥಧಾರಿ

ಏಪ್ರಿಲ್ ಒಂದು ಸಮೀಪಿಸುತ್ತಿದೆ. ಸಾಮಾನ್ಯವಾಗಿ ಜಗತ್ತಿಡೀ ಏಪ್ರಿಲ್ ಒಂದರಂದು ಮೂರ್ಖರ ದಿನವನ್ನಾಗಿ ಆಚರಿಸಲಾಗುತ್ತಿದೆ. ಭಾರತದ ಮಟ್ಟಿಗೆ ಅವತ್ತು ನಿಜವಾದ ಮೂರ್ಖತನದ ಕೃತ್ಯವೊಂದು ಜರುಗಲಿದೆ! ವಿಶ್ವ ವ್ಯಾಪಾರ ಒಕ್ಕೂಟ (ಡಬ್ಲ್ಯು ಟಿ ಓ) ದ ಒಪ್ಪಂದಕ್ಕೆ ಸಹಿ ಹಾಕಿರುವ ಭಾರತ ಸರಕಾರವು ಏಪ್ರಿಲ್ ಒಂದರಿಂದ ವಿವಿಧ ವಸ್ತುಗಳ ಆಮದು ಪ್ರಮಾಣದ ಮೇಲಿನ ನಿರ್ಬಂಧವನ್ನು ಪೂರ್ತಿಯಾಗಿ ರದ್ದುಗೊಳಿಸಲಿದೆ.

೧೯೯೭ ರ ಮೇ ತಿಂಗಳಲ್ಲಿ ೨೭೧೪ ವಸ್ತುಗಳ ಆಮದು ಪ್ರಮಾಣದ ಮೇಲಿನ ನಿರ್ಬಂಧವನ್ನು ೯ ವರ್ಷಗಳಲ್ಲಿ ರದ್ದುಗೊಳಿಸುವುದಾಗಿ ಭಾರತವು ವಿಶ್ವ ವ್ಯಾಪಾರ ಒಕ್ಕೂಟಕ್ಕೆ ಭರವಸೆ ನೀಡಿತ್ತು. ಆ ಬಳಿಕ ಕಾರ್ಯಗತಗೊಳಿಸುವ ಈ ಅವಧಿಯನ್ನು ಆರು ವರ್ಷಗಳಿಗೆ ಇಳಿಸಲಾಯಿತು. ಅಂದರೆ ೨೦೦೩ ನೇ ಇಸವಿವರೆಗೆ ಭಾರತಕ್ಕೆ ಸಮಯಾವಕಾಶವಿತ್ತು. ಆದರೆ ವಿಶ್ವ ವ್ಯಾಪಾರ ಒಕ್ಕೂಟದ ಮೇಲೆ ಅಮೆರಿಕವು ಒತ್ತಡ ಹೇರಿತು. ಭಾರತರದ ವಿದೇಶಿ ಪಾವತಿ ಸ್ಥಿತಿ ಭದ್ರವಾಗಿದೆ ಎಂಬ ವಾದ ಮಂಡಿಸಿತ್ತು. ಪ್ರಮಾಣವಾರು ಆಮದು ನಿರ್ಬಂಧಗಳನ್ನು ತೆಗೆದುಹಾಕಲು ೨೦೦೧ ರ ಏಪ್ರಿಲ್ ತೀಗಳನ್ನು ನಿಗದಿ ಮಾಡಲಾಯಿತು. ಈಗ ಏಪ್ರಿಲ್ ಒಂದು ಬಂದಿದೆ.

ಈಗಾಗಲೇ ಹಂತಹಂತವಾಗಿ ಹಲವು ವಸ್ತುಗಳ ಮೇಲಿನ ಆಮದು ನಿರ್ಬಂಧವನ್ನು ಸರಕಾರ ರದ್ದುಗೊಳಿಸುತ್ತಾ ಬಂದಿದೆ. ಕಳೆದ ವರ್ಷ ೨೦೦೦ ಏಪ್ರಿಲ್‌ನಲ್ಲಿ ೭೧೪ ವಸ್ತುಗಳನ್ನು ಆಮದು ಪ್ರಮಾಣ ನಿರ್ಬಂಧಪಟ್ಟಿಯಿಂದ ಮುಕ್ತಗೊಳಿಸಲಾಗಿತ್ತು. ಈಗ ಆಮದು ನಿರ್ಬಂಧ ಪಟ್ಟಿಯಲ್ಲಿ ೭೫೫ ವಸ್ತುಗಳು ಮಾತ್ರ ಉಳಿದಿರುವುದು. ಏಪ್ರಿಲ್ ಒಂದರಂದು ಈ ನಿರ್ಬಂಧವೂ ರದ್ದುಗೊಳ್ಳಲಿದೆ, ರಕ್ಷಣಾ ಇಲಾಖೆಗೆ ಸಂಬಂಧಿಸಿದ ೪೫ ವಸ್ತುಗಳು ಮಾತ್ರ ಇನ್ನು ಆ ಪಟ್ಟಿಯಲ್ಲಿ ಉಳಿದುಕೊಳ್ಳಲಿವೆ.

ಹಾಗಾಗಿ ಇನ್ನೀಗ ಏಪ್ರಿಲ್ ಒಂದರಿಂದ ಭಾರತೀಯ ಪ್ರಜೆ ಸರ್ವತಂತ್ರ ಸ್ವತಂತ್ರ ಜಾಗತಿಕ ಗ್ರಾಹಕ! ಹಳ್ಳಿ ಹಳ್ಳಿಗಳಲ್ಲಿ ಲಭ್ಯವಾಗಲಿರುವ ಡೆನ್ಮಾರ್ಕ್‌ನಿಂದ ಬರುವ ಕ್ವೀನ್ ಬಿಸ್ಕತ್ತುಗಳನ್ನು ತಿನ್ನುತ್ತಾ ಆತ ಮ್ಯಾಕ್ಸ್‌ವೆಲ್ ಕಾಫಿ

ಯನ್ನು ಹೀರಬಹುದು. ಇಟಲಿಯ ಪಾಸ್ತಾವನ್ನು ಬೆಳಗಿನ ಉಪಾಹಾರ ಮಾಡಿಕೊಳ್ಳಬಹುದು. ಥಾಯ್ಲೆಂಡಿನ ಕ್ಲೇರಾಲ್ ಹರ್ಬಲ್ ಶಾಂಪೂ ಬಳಸಿ ತಲೆಸ್ನಾನ ಮಾಡಬಹುದು. ಸ್ನಾನದ ಮನೆಯಲ್ಲಿ ಚೀನಾದ ಸಾಂಕ್ಸಿಯಾವೊ ಸೋಪ್ ಹಚ್ಚಿ ನೊರೆಗಳ ಜೊತೆ ಆಟವಾಡಬಹುದು. ಮಧ್ಯಾಹ್ನದ ಊಟಕ್ಕೆ ಮುನ್ನ ಆಸ್ಟ್ರೇಲಿಯಾ ಬೆರ್ರಿ ಜ್ಯೂಸ್ ಕುಡಿಯಬಹುದು. ಯುರೋಪ್‌ನಿಂದ ಬಂದ ಟಾರ್ಟಿಲಾ ಚಿಪ್ಸ್ ಕುರುಕುತ್ತಾ ಸಂಜೆಯ ಚಹಾ ಹೀರಬಹುದು. ಆತ ಇನ್ನು ಮುಂದೆ ಜಾಗತಿಕ ಗ್ರಾಹಕ !

ಈ ವಿದೇಶಿ ಬ್ರ್ಯಾಂಡ್ ವಸ್ತುಗಳು ಈಗಲೂ ಭಾರತ ಮಹಾನಗರಗಳಲ್ಲಿ ಲಭ್ಯವಿದೆ. ಆದರೆ ಸ್ವಲ್ಪ ದುಬಾರಿ. ೧೦೦ ಗ್ರಾಂ ಲಿಂಡ್ ಚಾಕಲೇಟು ದೆಹಲಿಯಲ್ಲಿ ೯೫ ರೂಪಾಯಿಗೆ ಈಗಲೂ ಸಿಗುತ್ತಿದೆ. ಬಿಸ್ಲೇರಿಯ ಬದಲಿಗೆ ಪೆರ್ರೀರ್ ಕುಡಿಯುವ ನೀರಿನ ಬಾಟಲಿ ೧೦೦ ರೂಪಾಯಿಗೆ ಲಭ್ಯವಿದೆ. ಏಪ್ರಿಲ್ ಒಂದರಿಂದ ಈ ವಿದೇಶಿ ಬ್ರ್ಯಾಂಡ್ ದುಬಾರಿಯಾಗುವುದು ನಿಶ್ಚಿತ. ಆದರೆ ವಿಶ್ವದ ವಿವಿಧೆಡೆ ಭಾರಿ ಪ್ರಮಾಣದಲ್ಲಿ ಉತ್ಪಾದನಾ ಸೌಕರ್ಯಗಳನ್ನು ಹೊಂದಿರುವ ಬಹುರಾಷ್ಟ್ರೀಯ ಕಂಪೆನಿಗಳಿಗೆ ಆಮದು ಕರೆ ಹೆಚ್ಚಳವೂ ಭಾರವಾಗಲಿಕ್ಕಿಲ್ಲ ಎನ್ನುವುದು ಹಲವು ತಜ್ಞರ ವಾದ.

ಈಗಾಗಲೇ ಭಾರತದ ಮಹಾನಗರಗಳಲ್ಲಿ ವಿದೇಶಿ ಬ್ರ್ಯಾಂಡ್ ವಸ್ತುಗಳನ್ನೇ ಮಾರಾಟ ಮಾಡುವ ಸುಮಾರು ೪೦೦ ಮಳಿಗೆಗಳಿವೆ ಎನ್ನುವುದು ಒಂದು ಅಂದಾಜು. ಇತರ ಸಣ್ಣ ನಗರಗಳನ್ನೂ ಲೆಕ್ಕಕ್ಕೆ ಹಿಡಿದರೆ, ವಿದೇಶಿ ಬ್ರ್ಯಾಂಡ್ ಉತ್ಪನ್ನಗಳ ಮಾರಾಟ ಮಳಿಗೆಗಳ ಸಂಖ್ಯೆ ೭೦೦ ತಲುಪಬಹುದು. ಆದರೆ ಏಪ್ರಿಲ್ ಒಂದರಿಂದ ಈ ವಿದೇಶಿ ಬ್ರ್ಯಾಂಡ್ ಮಳಿಗೆಗಳ ಸಂಖ್ಯೆ ವಿಪರೀತವಾಗಿ ಏರುವ ಸಾಧ್ಯತೆ ಇವೆ. ಈಗಾಗಲೇ ಭಾರತದಲ್ಲಿ ಉತ್ಪಾದನಾ ಘಟಕಗಳನ್ನು ಹೊಂದಿರುವ ಹಲವು ಬಹುರಾಷ್ಟ್ರೀಯ ಕಂಪನಿಗಳು ಭಾರತದ ಸಣ್ಣಪುಟ್ಟ ನಗರಗಳಲ್ಲೂ ವ್ಯಾಪಕ ಮಾರಾಟ ಜಾಲ ನಿರ್ಮಿಸಲು ಸಿದ್ಧವಾಗಿವೆ. ಸಾಫ್ಟಿ ಐಸ್‌ಕ್ರೀಮ್‌ಗಳ ಜನಪ್ರಿಯತೆಯನ್ನು ಗಮನಿಸಿರುವ ಹಿಂದೂಸ್ತಾನ್ ಲೀವರ್‌ನಂತಹ ಬಹುರಾಷ್ಟ್ರೀಯ ಸಂಸ್ಥೆ ಕೂಡಾ ಮ್ಯಾಗ್ನಮ್ ಸಾಫ್ಟಿ ಐಸ್‌ಕ್ರೀಮ್ ಮಳಿಗೆಗಳನ್ನು ತೆರೆದಿರುವಾಗ ಉಳಿದ ಕಂಪೆನಿಗಳು ಹಿಂದುಳಿಯುತ್ತವೆ ಎನ್ನುವ ಭರವಸೆ ಇಲ್ಲ.

ಭಾರತದಲ್ಲಿ ಈಗಾಗಲೆ ವಿದೇಶಿ ಬ್ರ್ಯಾಂಡ್ ವಸ್ತುಗಳಿಗೆ ಸುಮಾರು ಒಂದು ಕೋಟಿ ಗ್ರಾಹಕರು ಇದ್ದಾರೆ ಎನ್ನಲಾಗಿದೆ. ಅಂದರೆ ಆಸ್ಟ್ರೇಲಿಯಾ

ಮತ್ತು ನ್ಯೂಜಿಲೆಂಡ್‌ನ ಒಟ್ಟು ಜನಸಂಖ್ಯೆಯಷ್ಟು! ಈಗ ನಿರ್ಬಂಧಗಳ ಕಾರಣದಿಂದ ಕಡಿಮೆ ಪ್ರಮಾಣದಲ್ಲಿ ಆಮದಾಗುತ್ತಿರುವ ವಿದೇಶಿ ವಸ್ತುಗಳು ಏಪ್ರಿಲ್‌ನಿಂದ ಮುಕ್ತವಾಗಿ ಬೇಕಾದಷ್ಟು ಪ್ರಮಾಣದಲ್ಲಿ ದೇಶದೊಳಕ್ಕೆ ನುಸುಳಿದರೆ ಈ ಗ್ರಾಹಕರ ಸಂಖ್ಯೆ ಇಮ್ಮಡಿಯಾಗುವುದರಲ್ಲಿ ಸಂದೇಹವಿಲ್ಲ.

ಈಗಾಗಲೆ ವಿದೇಶಿ ವಸ್ತುಗಳೆಂದರೆ ಅತೀವ ಮೋಹ ಹೊಂದಿರುವ ಭಾರತೀಯರು ಮನೆಬಾಗಿಲಿಗೇ ಬಂದು ಸಿಗುವ ವಿದೇಶಿ ವಸ್ತುಗಳನ್ನು ಬಿಟ್ಟಾರೆಯೇ? ಟಿವಿ ಜಾಹೀರಾತುಗಳ ಮೂಲಕ ಗ್ರಾಹಕ ಸಂಸ್ಕೃತಿ ಹಳ್ಳಿ ಹಳ್ಳಿಗಳಲ್ಲಿ ಬಲವಾಗಿ ಬೇರೂರುತ್ತಿರುವ ಈ ದಿನಗಳಲ್ಲಿ ಬ್ರ್ಯಾಂಡ್ ಜನಪ್ರಿಯತೆಯನ್ನು ಸಾಧಿಸುವುದು ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಕಷ್ಟವೇನಲ್ಲ. ಭಾರತದ ಅಗ್ರಮಾನ್ಯ ಸಿನಿಮಾ ತಾರೆಯರೆಲ್ಲ ಈಗಾಗಲೆ ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳ ತಂಪು ಪಾನೀಯಗಳ ಜಾಹೀರಾತಿಗೆ ಕಾಲು ಕುಣಿಸಿದವರೇ. ಹಾಗಾಗಿ ಭಾರತದಲ್ಲಿ ಜನಾಭಿಪ್ರಾಯವನ್ನು ರೂಪಿಸುವ ಮನರಂಜನಾ ಕ್ಷೇತ್ರದ ಮುಂಚೂಣಿಯ ತಾರೆಯರು ಹೊಸ ಉತ್ಪನ್ನಗಳ ಜಾಹೀರಾತಿಗೆ ಮಾಡೆಲ್‌ಗಳಾಗುವುದು ಕಷ್ಟವೇನಲ್ಲ.

ವಿದೇಶಿ ವಸ್ತುಗಳ ಈ ಮೋಹವು. ದೇಶೀಯ – ಅದರಲ್ಲೂ ಮುಖ್ಯವಾಗಿ ಸ್ಥಳೀಯ ಕೈಗಾರಿಕೆಗಳ ಉತ್ಪಾದನೆಗೆ ಮಾರಕವಾಗಲಿದೆ ಎನ್ನುವ ಭೀತಿ ಭಾರತದ ಅರ್ಥಶಾಸ್ತ್ರಜ್ಞರದು. ಈ ಭೀತಿಯನ್ನು ಸುಲಭವಾಗಿ ತಳ್ಳಿಹಾಕುವಂತಿಲ್ಲ. ವಿದೇಶಿ ವಸ್ತುಗಳು ರಾಶಿ ರಾಶಿಯಾಗಿ ಭಾರತೀಯ ಮಾರುಕಟ್ಟೆಯನ್ನು ವಶಪಡಿಸಿಕೊಂಡ ಮೇಲೆ ದೇಶದ ಸಂಸ್ಕೃತಿ ಹಾಗೂ ದೇಶಿಯ ಉತ್ಪಾದನೆಯ ಮೇಲೆ ಆಗುವ ದೂರಗಾಮಿ ಪರಿಣಾಮಗಳನ್ನು ಅಲಕ್ಷಿಸಲಾಗದು. ಈಗಾಗಲೆ ಕೃಷಿ ಕ್ಷೇತ್ರದ ಮೇಲೆ ವಿದೇಶಿ ವಸ್ತುಗಳ ಆಕ್ರಮಣದ ಪರಿಣಾಮಗಳು ಸ್ಪಷ್ಟವಾಗಿವೆ. ನಾಳೆ ದೇಶಿಯ ಉತ್ಪಾದನಾ ಕ್ಷೇತ್ರದಲ್ಲೂ ಈ ವಿದೇಶಿ ವಸ್ತುಗಳ ಆಕ್ರಮಣ ಕೋಲಾಹಲ ಉಂಟುಮಾಡುವುದು ಖಂಡಿತಾ.

ಇಡ್ಲಿ ಸಾಂಬಾರ್, ಕಬ್ಬಿನ ಹಾಲಿನ ಜಾಗದಲ್ಲಿ ಇಟಲಿಯ ಪಾಸ್ಟಾ. ಆಸ್ಟ್ರೇಲಿಯಾದ ಬೆರ್ರಿ ಜ್ಯೂಸ್‌ಗಳು ಇನ್ನು ಮುಂದೆ ಭಾರತದ ಹಳ್ಳಿ ಹಳ್ಳಿಗಳಲ್ಲೂ ಕಾಣಸಿಕ್ಕಿದರೆ. ಏಪ್ರಿಲ್ ಒಂದರಂದು ಆಚರಿಸಲಾಗುವ 'ಮೂರ್ಖರ ದಿನ' ನಿಜಕ್ಕೂ ಅರ್ಥಪೂರ್ಣವಾಗಲಿದೆ! ★

('ಪ್ರಜಾವಾಣಿ' ಸಾಭಾರ)

ಅಣ್ಣಿಗೇರಿಯ ಅಣ್ಣಾ ಹಜಾರೆ
ಅಬ್ದುಲ್ ಖಾದರ್ ನಡಕಟ್ಟಿನ್

ಉತ್ತರ ಕರ್ನಾಟಕದ ಹುಬ್ಬಳ್ಳಿಯಿಂದ ಗದಗಿಗೆ ಸಾಗುವ ದಾರಿಯ ಮಧ್ಯದಲ್ಲಿ ಬರುವ ಅಣ್ಣಿಗೇರಿ ಕಪ್ಪು ಎರೆ ಮಣ್ಣಿನ, ಸುಡು ಬಿಸಿಲಿನ ಒಣ ಭೂಮಿ ಪ್ರದೇಶ. ಅಣ್ಣಿಗೇರಿಯಂತೂ ದೂಳು, ಕಸ ಕೊಚ್ಚೆಗಳಿಂದ ತುಂಬಿ ಕಾಲಿಡಲೇ ಕಷ್ಟವೆನಿಸುವ ಊರು. ಸದಾ ಬರಗಾಲದಲ್ಲೇ ಇರುವ ಈ ಊರನ್ನು ಕಷ್ಟಪಟ್ಟು ದಾಟಿ ಅಂಚಿಗೆ ಬಂದರೆ ಆಶ್ಚರ್ಯವೆನಿಸುವ ರೀತಿಯಲ್ಲಿ ತಂಪಾದ, ಗಿಡಮರಗಳ ಹಸಿರಿನಿಂದ ಕೂಡಿ ಕಂಗೊಳಿಸುವ ಸ್ವಚ್ಛನೆಯ ಫಾರಂ ಒಂದು ಕಾಣುವುದು. ಇದು 'ಅಣ್ಣಿಗೇರಿಯ ಅಣ್ಣಾ ಹಜಾರೆ', 'ಹುಣಸೆ ಹುಚ್ಚ' ಇತ್ಯಾದಿ ಸುತ್ತಮುತ್ತಲಿನ ಜನರಿಂದ ಪ್ರೀತಿಯ ಬಿರುದುಗಳನ್ನು ಪಡೆದಿರುವ ಅಬ್ದುಲ್ ಖಾದರ್ ನಡಕಟ್ಟಿನ್‌ರವರ ೧೬ ಎಕರೆ ವಿಸ್ತೀರ್ಣದ ಸುಂದರ ಫಾರಂ 'ವಿಶ್ವಶಾಂತಿ'. ನಲವತ್ತೈದು ವರ್ಷ ಪ್ರಾಯದ ನಡಕಟ್ಟಿನ್ ೨೫ ವರ್ಷಗಳಿಂದ ಶೋಧಿಸಿದ ಹತ್ತಾರು ಕೃಷಿ ಯಂತ್ರಗಳು ಸ್ವಚ್ಛ ಸುಣ್ಣದ ಬಿಳಿ ಬಣ್ಣದ ಮನೆಯ ಸುತ್ತ ಸಹಜ ಪ್ರದರ್ಶನಕ್ಕೆ ಒಳ ಪಟ್ಟಿರುತ್ತದೆ. ಎದುರಿಗೆ ಒಂದು ಗುಂಟೆಯ ಅಂಗಳದಲ್ಲಿ ಹಚ್ಚಹಸಿರಿನ ಕಾಶ್ಮೀರಿ ಹುಲ್ಲಿನ ಲಾನ್. ಮನೆಯ ಪಕ್ಕದಲ್ಲಿ ಮತ್ತು ಹಿಂಭಾಗದಲ್ಲಿ ಐದಾರು ತಿಳಿ ನೀರಿನ ಕೃಷಿ ಹೊಂಡಗಳು ಮತ್ತಷ್ಟು ತಣ್ಣನೆಯ ಅನುಭವ ನೀಡುತ್ತಿರುತ್ತವೆ. ತನ್ನ ೧೬ ಎಕರೆ ಜಮೀನಿನಲ್ಲಿ ವೈವಿಧ್ಯಮಯ ತಳಿಗಳ ೧೬೦೦ ಹುಣಸೆ ಮರಗಳು, ೧೨೦೦ ಸಾಗುವಾನಿ, ೬೦೦ ಬೇವು, ೫೦ ಮಾವು, ೨ ಬಾದಾಮಿ ಗಿಡ, ೨೫ ದಾಳಿಂಬೆ ಗಿಡ, ೩೦ ಪೇರಲೆ ಗಿಡ, ೨೦ ತೆಂಗಿನಮರಗಳು, ವಿವಿಧ ಹೂ ಗಿಡಗಳು ಈ ಫಾರಂನ ಸೌಂದರ್ಯಕ್ಕೆ ಹಸಿರು ನಿಶಾನೆ ಹೊದಿಸಿರುತ್ತವೆ.

ಓದಿನ ಅಪಾರ ಆಸಕ್ತಿಯಿದ್ದರೂ, ತಂದೆಯ ಒತ್ತಡದಿಂದ ನಡಕಟ್ಟಿನ್ ಪಿಯುಸಿ ಮುಗಿಸಲಾರದೇ ಮನೆಗೆ ಹಿಂತಿರುಗಿ ಕೃಷಿಯಲ್ಲಿ ತೊಡಗುವಂತಾಯಿತು. ಆದರೆ ಇವರ ಅನ್ವೇಷಣಾ ಪ್ರವೃತ್ತಿ ಮಾತ್ರ ಅಡೆತಡೆಗಳಿಲ್ಲದೆ ಬೆಳೆಯುವಂತಾಯಿತು. ಬೆಳಿಗ್ಗೆ ಸ್ಕೂಲಿಗೆ ಹೋಗಲು ಬೇಗ ಏಳುವಂತಾಗಲು ಅಲರಾಂ ಸಾಲದಾಗಿತ್ತು. ಮುಖಕ್ಕೆ ನೀರೆರಚಬೇಕಿತ್ತು. ಅದಕ್ಕೆ ಅಲರಾಂ ಕೀಲಿಗೆ ಹಗ್ಗದ ಮೂಲಕ ನೀರು ತುಂಬಿದ ಬಾಟಲ್ ಒಂದಕ್ಕೆ ಸಂಪರ್ಕ ಕಲ್ಪಿಸಿ ಅದು ಹೊಡೆಯಲು ಶುರು ಮಾಡಿದಾಗ ದಾರ ಸಡಿಲಗೊಂಡು ಬಾಟಲ್ ಬಾಗಿ ನೀರು ಮುಖದ ಮೇಲೆ ಸಿಂಪಡಿಸಿ ಬಡಿದೆಬ್ಬಿಸುವಂತೆ ಮಾಡುವ

ಅನ್ವೇಷಣೆ ಇವರ ಮೊದಲ ಸಾಧನೆ ಎನ್ನಬಹುದು. ನಂತರದ ದಿನಗಳಲ್ಲಿ ಸ್ವಯಂ ಚಾಲಿತ ಬಿತ್ತುವ ಕೂರಿಗೆ, ಸಣ್ಣ ಕೊಕ್ಕೆ ಮೂಲಕ ಬಾಗುವಂತಾಗುವ ಎತ್ತಿನಗಾಡಿ, ಪದೇ ಪದೇ ಹರಿಯಲು ಅಗತ್ಯವಿರದ ಟ್ರ್ಯಾಕ್ಟರ್ ಬ್ಲೇಡಿನ ಕುಡ, ನೀರು ಕಾಯಿಸಲು ಇಂಧನ ಉಳಿಸುವ ನಾಟೀ ಬಾಯ್ಲರ್, ಕೋಳಿಗಳನ್ನು ದಿಡೀರನೇ ಹುರಿಯುವ ಚಿಕನ್ ಕಬಾಬ್‌ಯಂತ್ರ ಹೀಗೆ ಈ ದೇಶೀ ಅನುಶೋಧಕರು ಕಂಡು ಹಿಡಿದಿರುವ ನಾಟೀ ಯಂತ್ರಗಳು ಹತ್ತು ಹಲವಾರು. ಆದರೆ ನಮ್ಮ ಗ್ರಾಮೀಣ ಅಭಿವೃದ್ಧಿಗೆ ಇವರ ದೊಡ್ಡ ಕೊಡುಗೆ ಎಂದರೆ ಸುಸ್ಥಿರ ರೀತಿಯಲ್ಲಿ ಹುಣಸೇ ಕೃಷಿ ಕೈಗೊಳ್ಳುವ ಬಗ್ಗೆ ಈತ ಕಂಡು ಹಿಡಿದಿರುವ ವಿವಿಧ ಶೋಧನೆಗಳೆನ್ನ ಬಹುದು. ಹುಣಸೇ ಕೊಯಿದು, ಬೇರ್ಪಡಿಸಿ, ಸಂಸ್ಕರಿಸುವ ವರೆಗಿನ ಯಂತ್ರಗಳಿಂದ ಹಿಡಿದು ಸಾವಯವ ರೀತಿಯಲ್ಲಿ ಮಣ್ಣು ನೀರು ಸಂರಕ್ಷಿಸುವ ವರೆಗೆ ಇದು ವಿಸ್ತರಿಸಿರುತ್ತದೆ.

ಆ ಪ್ರದೇಶದ ಸಾಮಾನ್ಯ ಬೆಳೆ ಶೇಂಗಾ, ಮೆಣಸು. ತಂದೆಯಿಂದ ಹೊಲದ ಉಸ್ತುವಾರಿ ಜವಾಬ್ದಾರಿ ಬಂದೊಡನೇ ನಡಕಟ್ಟಿನ್‌ರ ಅನ್ವೇಷಕ ಮನಸ್ಸು ಬೇರೆ ಬೆಳೆ ಪದ್ಧತಿಯತ್ತ ಹರಿಯುವಂತಾಯಿತ್ತು. ತೋಟಗಾರಿಕೆ ಬೆಳೆಗಳಿಂದ ಆದಾಯ ಅಧಿಕ ಸಿಗಬಹುದೆಂದು ಭಾವಿಸಿದ ಇವರು ತಮ್ಮ ೧೬ ಎಕರೆ ಜಮೀನಿನಲ್ಲಿ ಮಾವು, ತೆಂಗು, ಸಪೋಟ, ಬ್ಯಾರೆ ಗಿಡಗಳನ್ನು ನೆಟ್ಟು ಮಧ್ಯದಲ್ಲಿ ಮೆಣಸು ಬೆಳೆದರು. ಆದರೆ ಎರೆ ಮಣ್ಣಿನ ಸವಳು ಭೂಮಿ. ಜೊತೆಗೆ ನೀರಿನ ಅಭಾವ ಯಾವ ಗಿಡಗಳೂ ಬದುಕಲಿಲ್ಲ. ಆಗ ಚಿಂತೆ ಶುರು ವಾಗಿ ಕೂತ ಇವರ ಗಮನಕ್ಕೆ ಬಂದಿದ್ದು ಪಕ್ಕದ ದೇಸಾಯರ ಹೊಲದಲ್ಲಿ ದಷ್ಟಪುಷ್ಟವಾಗಿ ಬೆಳೆದು ನಿಂತಿದ್ದ ಹುಣಸೆ ಮರಗಳು.

ಮಾವು, ಸಪೋಟ ಕಡಿದು ೧೯೮೫ರ ಹೊತ್ತಿಗೆ ಸುಮಾರು ಅರ್ಧಭಾಗ ಭೂಮಿಯಲ್ಲಿ ೬೦೦ ಹುಣಸೆ ಗಿಡಗಳನ್ನು ಅದೂ ವಿವಿಧೆಡೆಗಳಿಂದ ತಂದ ನಾಟೀ ತಳಗಳನ್ನು; ೧೯೯೦ರಲ್ಲಿ ಮತ್ತೆ ೧೧೦೦ ಗಿಡಗಳನ್ನು ಉಳಿದೆಲ್ಲಾ ಬಹುಪಾಲು ಭೂಮಿಯಲ್ಲಿ ನೆಟ್ಟರು. ಕೊಟ್ಟಿಗೆ ಗೊಬ್ಬರ ಹೊರತಾಗಿ ಮತ್ತೇನೂ ಹಾಕಲಿಲ್ಲ. ಹಾಗಾಗಿ, ಸುತ್ತಮುತ್ತಲಿನ ಜನರೆಲ್ಲಾ ಇವರನ್ನು 'ಹುಣಸೇ ಹುಚ್ಚ' ಎಂದು ಪ್ರೀತಿಯಿಂದ ಕರೆಯಲು ಶುರುಮಾಡಿದರು. ನಡಕಟ್ಟಿನ್‌ರ ಈ ಹುಣಸೇ ಹುಚ್ಚೇ ನಂತರ ಹಲವಾರು ಅನುಶೋಧನೆಗಳಿಗೆ ನಾಂದಿಯಾಯಿತ್ತು.

ಸದಾ ಬರಪೀಡಿತ ಅಣ್ಣಿಗೇರಿಯಂತಹ ಸ್ಥಳದಲ್ಲಿ ಗಿಡಗಳನ್ನು ಬದುಕಿಸಿ

ಉಳಿಸಿಕೊಳ್ಳುವುದು ಕಷ್ಟದ ಕೆಲಸ. ಹುಣಸೆ ಹೇಳಿಕೇಳಿ ಬರ, ಮಣ್ಣಿನ ಲೋಪ, ಹವಮಾನಗಳ ವೈಪರೀತ್ಯಗಳನ್ನು ತಡೆದುಕೊಳ್ಳುವಲ್ಲಿ ಅಪಾರ ಸ್ಥಿತಪ್ರಜ್ಞತ ಹೊಂದಿರುವ ಗಿಡ. ಆದರೂ ಮೊದಮೊದಲಿಗೆ ಅದಕ್ಕೆ ತೇವಾಂಶವು ಬೇಕಿದ್ದು, ಅದೂ ನಡಕಟ್ಟಿನ್ ಭೂಮಿಯಲ್ಲಿ ಸುಲಭವಾಗಿ ದೊರೆಯದಂತಾಯ್ತು. ಛಲ ಬಿಡದ ನಡಕಟ್ಟಿನ್‌ರವರು ೨-೩ ಕಿಲೋಮೀಟರ್‌ಗಳಿಂದ ನೀರು ತಂದು ಇವುಗಳಿಗೆ ಸುರಿದರು. ಕೊಟ್ಟ ನೀರು ಆವಿಯಾಗದಂತೆ ತಡೆಹಿಡಿಯಲು ಮೂರು ಇಂಚಿನ ಸೊಪ್ಪು ಕಳೆ, ತ್ಯಾಜ್ಯಗಳ ಭೂ ಹೊದಿಕೆ (mulching) ಹೊಲದಾದ್ಯಂತ ನೀಡಿದರು. ಹಾಗೇ ಹೊಲದುದ್ದಕ್ಕೂ ಇಳಿಜಾರಿಗೆ ಅಡ್ಡಲಾಗಿ ಬದುಕಟ್ಟೆಗಳನ್ನು ನಿರ್ಮಿಸಿ ಅಲ್ಪಸ್ವಲ್ಪ, ಮಳೆಬಂದಾಗ ಮಣ್ಣು ಕೊಚ್ಚಿ ಹೋಗುವ ಸಾಧ್ಯತೆಯನ್ನು ಸಂಪೂರ್ಣ ತಡೆಹಿಡಿದರು. ಹಾಗಾಗಿ ೧೯೮೫ರಿಂದ ಹಲವು ಬರಗಾಲಗಳನ್ನು ಅಣ್ಣಿಗೇರಿ ಪ್ರಾಂತ್ಯದ ರೈತರು ಕಂಡರೂ ನಡಕಟ್ಟಿನ್‌ರ ಹುಣಸೆ ಗಿಡಗಳು ಮಾತ್ರ ಯಾವುದೇ ದೊಡ್ಡ ಗಂಡಾಂತರಗಳು ಎದುರಾಗದೇ ಪಾರಾಗುವಂತಾಯ್ತು.

ಹುಣಸೇ ಗಿಡಗಳು ಬೆಳೆದು ದೊಡ್ಡವಾಗುವ ಹೊತ್ತಿಗೆ ನೀರಿನ ಬೇಡಿಕೆ ಅತಿಯಾಗತೊಡಗಿತು. ಅನಿವಾರ್ಯವಾಗಿ ಬೋರ್‌ವೆಲ್ ನೀರಾವರಿಗೆ ನಡಕಟ್ಟಿನ್ ಇಳಿಯಬೇಕಾಯ್ತು. ಇಲ್ಲೂ ಅವರ ಅನ್ವೇಷಕ ಮನಸ್ಸು ಕೆಲಸಮಾಡಿ ಒಂದೆಡೆ ಅಭಾವದ ಅಂತರ್ಜಲವನ್ನು ಅತ್ಯಂತ ಮುತುವರ್ಜಿಯಿಂದ ಬಳಸುವುದು, ಇನ್ನೊಂದೆಡೆ ಆ ಅಂತರ್ಜಲದ ಪುನರ್ ಸೃಷ್ಟಿಮಾಡಿ ಅಧಿಕಗೊಳಿಸುವ ಅನನ್ಯ ರೀತಿಯ ನೀರಾವರಿ ಪದ್ಧತಿಯನ್ನು ಕಂಡು ಹಿಡಿಯುವಂತಾಯ್ತು.

ತಮ್ಮ ಹುಣಸೆ ಗಿಡಗಳಿಗೆ ನೀರುಣಿಸಲು ಎರಡೂ ಲಕ್ಷಕ್ಕೂ ಅಧಿಕ ಹಣ ಖರ್ಚುಮಾಡಿ ಹೊಲದ ಹಲವೆಡೆ ಸುಮಾರು ೧೨ ಕೊಳವೆ ಬಾವಿಗಳನ್ನು ತೋಡಿದರೂ ಕೊನೆಗೂ ನೀರು ನೀಡುವಂತಾಗಿದ್ದು ಕೇವಲ ಎರಡೇ ಬಾವಿಗಳು. ಅದೂ ಅರ್ಧ ಇಂಚು ಮಾತ್ರ. ಕೇವಲ ೫ ಹೆಚ್.ಪಿ. ಸಾಮರ್ಥ್ಯದ ಒಂದೇ ಮೋಟಾರಿನ ಸಹಾಯದಿಂದ ಈ ಎರಡು ಕೊಳವೆ ಬಾವಿಗಳಿಂದ ಸತತ ನೀರು ಎಳೆದು ಅದನ್ನು ೧೦೨ ಅಡಿ ಅಗಲ ೧೦ ಅಡಿ ಆಳದ ಎರಡು ಫಾರಂ ಹೊಂಡಗಳಲ್ಲಿ ಶೇಖರಿಸಿ, ಹೀಗೆ ಶೇಖರವಾದ ನೀರನ್ನು ಅದೇ ಮೋಟಾರಿನ ಮೂಲಕ ೧೭೦೦ ಹುಣಸೇ ಗಿಡಗಳಿಗೆ ಹನಿ ನೀರಾವರಿ ಮೂಲಕ ನೀರುಣಿಸುವ ಅನನ್ಯ ಮಿತ ನೀರಾವರಿ ಪ್ರಯೋಗವನ್ನು ನಡಕಟ್ಟಿನ್ ೧೯೮ರಿಂದ ನಡೆಸಿಕೊಂಡು ಬಂದಿರುವರು. ಈ ಫಾರಂ ಹೊಂಡಗಳಲ್ಲಿ ಮಳೆಗಾಲದಲ್ಲಿ ನೀರು ಶೇಖರಣೆಯಾಗುವುದರಿಂದ ಇವರ ಹೊಲದಲ್ಲಿ ಅಂತರ್‌ಜಲದ ಮಟ್ಟ ಏರುವಂತಾಗಿದೆ.

ಹದಿನಾರು ಎಕರೆಯಲ್ಲಿ ಸಾವಿರಾರು ಹುಣಸೆ ಗಿಡಗಳನ್ನು ಸುಸ್ಥಿರ ನೀರು ನಿರ್ವಹಣೆ ಮೂಲಕ ಬೆಳೆಯುವಲ್ಲಿ ನಡಕಟ್ಟಿನ್ ಯಶಸ್ವಿಯಾದರು. ನಂತರ, ಕೆಲ ವರ್ಷಗಳಲ್ಲಿ ಆ ಹುಣಸೇ ಮರಗಳು ಫಲ ನೀಡಲು ಶುರುವಾದಾಗ ಒಮ್ಮೆಗೇ ಅವನ್ನು ಕೊಯಿಲು ಮಾಡುವ, ನಂತರ ಬೀಜ ತೆಗೆದು ಸಂಸ್ಕರಿಸುವ ಕೆಲಸಕ್ಕಾಗಿ ಆಳುಗಳ ಕೊರತೆ ಎಲ್ಲಾ ಸಮಸ್ಯೆಗಳು ಎದುರಾಯ್ತು. ಈ ಸಮಸ್ಯೆಗಳಿಗೆ ಪರಿಹಾರವಾಗಿ ನಡಕಟ್ಟಿನ್ ಮೂರು ಯಂತ್ರೋಪಕರಣಗಳ ಅನ್ವೇಷಣೆ ಮಾಡು ವಂತಾದರು.

ಆದರೆ ವಾಸ್ತವದಲ್ಲಿ ಈ ಎಲ್ಲಾ ಲೆಕ್ಕಾಚಾರಗಳು ತಲೆಕೆಳಗಾಗಿ ಇಂದು ನಡಕಟ್ಟಿನ್ ಲಕ್ಷಾಂತರ ರೂಪಾಯಿಗಳ ಸಾಲದ ಹೊರೆಯಲ್ಲಿ ಬೀಳುವಂತಾಗಿರು ವರು. ಈ ಎಲ್ಲಾ ಯಂತ್ರಗಳ ಶೋಧನೆಯಿಂದಾಗಿ ತಾವು ಇಂದು ೨೦ ಲಕ್ಷ ರೂಪಾಯಿಗಳ ಸಾಲದ ಹೊರೆ ಹೊರುವಂತಾಗಿರುವುದಾಗಿ ನಡಕಟ್ಟಿನ್ ತಿಳಿಸುತ್ತಾರೆ. ಹಾಗೇ, ಇವರ ತಂದೆಯಿಂದ ಬಂದ ೭೪ ಎಕರೆಗಳಲ್ಲಿ ಮುಕ್ಕಾಲು ಪಾಲು ಭೂಮಿ ಈಗಾಗಲೇ ಸಾಲಗಾರರ ಪಾಲಾಗಿರುತ್ತದೆ. ಇವರ ಫಾರಂನ್ನು ರಾಜಕಾರಣಿಗಳಿಂದ ಹಿಡಿದು ಮಠಾಧಿಪತಿಗಳು, ಕೃಷಿ ವಿಜ್ಞಾನಿಗಳು, ಕೃಷಿ ತೋಟಗಾರಿಕೆ ಇಲಾಖೆಯವರು, ರೈತರು, ವಿದ್ಯಾರ್ಥಿ ಗಳೆಲ್ಲಾ ಭೇಟಿ ನೀಡಿ ಹೋಗಿರುವರು. ಬರುವ ಎಲ್ಲರಿಂದ ಭರವಸೆ ಮಾತ್ರ ಯಥೇಚ್ಛವಾಗಿ ನಡಕಟ್ಟಿನ್‌ಗೆ ದೊರೆಯುವಂತಾಯ್ತು. ಪತ್ರಿಕೆ, ಸುದ್ದಿ ಮಾಧ್ಯಮಗಳಂತೂ ಒಂದರ ಮೇಲೊಂದರಂತೆ ಪೈಪೋಟಿ ನಡೆಸಿ ನಡಕಟ್ಟಿನ್ ಗುಣಗಾನಮಾಡಿ ಈತನ ಸಂಶೋಧನೆಗಳ ಬಗ್ಗೆ ಅಬ್ಬರದ ಪ್ರಚಾರ ನೀಡಿದವು. ತನ್ನ ಸಂಶೋಧನೆಗಳನ್ನು ಪೇಟೆಂಟ್ ಮಾಡಿಸುವ ಬಗ್ಗೆ ಚಿಂತಿಸಿ ದೆಹಲಿಯ ವರೆಗೂ ಓಡಾಡಿ ಬಂದರೂ ಏನೂ ಪ್ರಯೋಜನವಾಗಲಿಲ್ಲ. ತನ್ನೆಲ್ಲಾ ಶೋಧನೆಗಳನ್ನು ಕೃಷಿ ಆಧಾರಿತ ಕೈಗಾರಿಕಾ ರೂಪದಲ್ಲಿ ಅಭಿವೃದ್ಧಿಪಡಿಸಿ ಮಾರುಕಟ್ಟೆ ಏರ್ಪಡಿಸಲು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಿಗೆ ಒಂದು ಮನವಿ ಪತ್ರ ಸಲ್ಲಿಸಿರುವರು. ಕೊನೆಯ ಪ್ರಯತ್ನವಾಗಿ ಇನ್‌ಫೋಸಿಸ್ ಪ್ರತಿಷ್ಠಾನದ ಧರ್ಮದರ್ಶಿಯಾದ ಶ್ರೀಮತಿ ಸುಧಾ ಮೂರ್ತಿಯವರ ಸಹಾಯದ ಮೊರೆ ಹೊಕ್ಕಿರುವರು. ಎಲ್ಲೆಡೆಯಿಂದ ನಿರಾಶಾದಾಯಕ ಪ್ರತಿ ಕ್ರಿಯೆ ನೋಡಿ ಬೇಸತ್ತು ಕೆಲ ದಿನಗಳ ಹಿಂದೆ ಕುಟುಂಬ ಸಮೇತ ರಾಜ್ಯದ ಕೃಷಿ ಮಂತ್ರಿಗಳ ನಿವಾಸದ ಎದುರು ಉಪವಾಸ ಸತ್ಯಾಗ್ರಹ ಹೂಡುವ ಮಟ್ಟಕ್ಕೂ ಹೋಗಿರುವರು. ಅಂತಿಮ ಅಸ್ತ್ರವಾಗಿ, ನಡಕಟ್ಟಿನ್ ಆತ್ಮಹತ್ಯೆಯ ಬೆದರಿಕೆಯನ್ನೂ ಹಾಕುವಂತಾಗಿರುವರು. ಅಂದ ಮೇಲೆ ನಮ್ಮ ಸರ್ಕಾರ

ಮತ್ತು ಸಮಾಜ ಈ ನಡಕಟ್ಟನ್ ನೆರವಿಗೆ ಬರುವ ಸಾಧ್ಯತೆಗಳು ಏನಿವೆ ಯೆಂಬುದನ್ನು ಪರಿಶೀಲಿಸುವುದು ಅತಿ ಅಗತ್ಯ.

ನಡಕಟ್ಟನ್ ಇಂದು ಒಬ್ಬ ಬರಿದೇ ವ್ಯಕ್ತಿಯಲ್ಲ. ಈತ ಮತ್ತು ಈತನ ಕೃಷಿ ಪ್ರಯೋಗ ಈ ದೇಶದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೇ ಒಂದು ಅತ್ಯಂತ ಸೂಕ್ತವಾದ ಮಾದರಿಯಾಗಬಹುದಾಗಿದೆ. ಈತನ ನೆರವಿಗೆ ಬರುವುದಿರಲಿ, ನಡಕಟ್ಟನ್ ಪ್ರಯೋಗ, ಬದುಕಿನ ರೀತಿಯನ್ನು ನಮ್ಮ ರೈತರ ಏಳಿಗೆಗೆ ಸೂಕ್ತರೀತಿಯಲ್ಲಿ ಬಳಸಿಕೊಳ್ಳದಿದ್ದಲ್ಲಿ ಅದೊಂದು ದೊಡ್ಡ ದುರಂತ ಮಾತ್ರವಲ್ಲ. ಮೂರ್ಖತನವಾದೀತು. ★

('ಹಿತ್ತಲ ಗಿಡ' ಸಾಭಾರ)

ಆಸೆ

ಎಷ್ಟು ಪುಟ್ಟ ಕಣ್ಣು ನನ್ನದು
ನಾ ನೋಡಲಾರೆ
ಎಷ್ಟು ಪುಟ್ಟ ಮೂಗು ನನ್ನದು
ನಾ ಮೂಸಲಾರೆ
ಎಷ್ಟು ಪುಟ್ಟ ನಾಲಿಗೆ ನನ್ನದು
ನಾ ನೆಕ್ಕಲಾರೆ
ಎಷ್ಟು ಪುಟ್ಟ ಮೈ ನನ್ನದು
ನಾ ಮುಸುಕಲಾರೆ
ಅಯ್ಯೋ ದೇವರೇ !
ನನಗೆಲ್ಲ ದೊಡ್ಡದು ಕೊಡು
ನಾನು ಈ ಭೂಮಿಯನ್ನೇ
ಅರೆದು ಕುಡಿದು ಬಿಡುತ್ತೇನೆ.

– ಡಾ॥ ವಸಂತಕುಮಾರ ಪೆರ್ಲ

ಅವಗುಣಗಳ ವಿನಾಶವಲ್ಲ, ರೂಪಾಂತರಣ ಮಾತ್ರ ಸಾಧ್ಯ

–ಸತ್ಯವ್ರತ

(ಶ್ರೀ ಸತ್ಯವ್ರತರು ಕರ್ನಾಟಕದ ಶ್ರೇಷ್ಠ ಚಿಂತಕರಲ್ಲಿ ಒಬ್ಬರು; ಹೋರಾಟಗಾರರಾಗಿ, ಲೇಖಕರಾಗಿ, ಸಂಪಾದಕರಾಗಿ ಅವರು ಪಡೆದಿರುವ ಜೀವನಾನುಭವ ಅಪರೂಪವಾದುದು; ಎಲ್ಲಕ್ಕಿಂತ ಮಿಗಿಲಾಗಿ ಸರಳಜೀವಿ ಹಾಗೂ ತ್ಯಾಗಿ. ಈ ಲೇಖನದಲ್ಲಿ ಅವರ ದೃಷ್ಟಿಕೋನ ಮತ್ತು ವಿಚಾರ ಹೊರಹೊಮ್ಮಿವೆ. - ಸಂ)

ಗುಣಾವಗುಣ ಮತ್ತು ದೋಷ-ದೌರ್ಬಲ್ಯಗಳ ಆಗರ ಮನುಷ್ಯ. ಅವನ ಮೇಲೆ ಇವೆಲ್ಲದರ ನಿರಂತರ ಪ್ರಭಾವ ಆಗುತ್ತಿರುವುದಕ್ಕೂ ಮತ್ತು ಅವನಲ್ಲಿ ಕಂಡುಬರುವ ಅಭಾವಗಳಿಗೂ ಏನು ಕಡಿಮೆ? ವಿಕಾರ-ವಿಕೃತಿಗಳಿಲ್ಲದವನೇ ವಿರಳ. ಮಾನಸಿಕ ಗಂಟು ಗ್ರಂಥಿಗಳಿಗೂ ಕೊರತೆ ಇಲ್ಲ.

ಅವಗುಣ ದುರ್ಗುಣಗಳನ್ನು ಮೆಟ್ಟಿ ಕ್ರಮೇಣ ಅವುಗಳ ಮೇಲೆ ಜಯ ಸಾಧಿಸುವುದೂ, ನಿರ್ವಿಕಾರನೂ ಸತ್ಪ್ರವೃತ್ತನೂ, ಋಜುಮಾರ್ಗಾವಲಂಬಿಯೂ ಆಗಿ ಸತ್ಪ್ರೋತ್ಕರ್ಷ ಸಾಧಿಸುವುದಕ್ಕೆ ತನ್ನನ್ನು ತಾನು ಅಣಿಗೊಳಿಸಿಕೊಳ್ಳುವುದು ಅವನ ಜೀವಿತೋದ್ದೇಶ, ಅದೇ ಅವನ ಅವತಾರ ಕಾರ್ಯ.

ತನಗೆಂದು ಗೊತ್ತಾದ ಅವತಾರ ಕಾರ್ಯವನ್ನು ಯಥಾಸಾಂಗವಾಗಿ ಪೂರ್ಣಗೊಳಿಸಲು ಅವನ ನೆರವಿಗೆ ಬರುವಂಥವು ಸದ್ಗ್ರಂಥ, ಸತ್ಸಂಗ, ಶರಣಾಗತಿ ತತ್ವ, ಸತ್ಕಾರ್ಯ, ಸದ್ವ್ರತ ಪರಿಪಾಲನೆ, ಪ್ರಾರ್ಥನೆ, ನಾಮ ಜಪ, ಯಮ–ನಿಯಮಗಳ ಆಚರಣೆ ಇತ್ಯಾದಿ ಇವೇ ಅವನಿಗೆ ಲಭ್ಯವಿರುವ ಸಾಧನಗಳು.

ತನ್ನ ಕಾರ್ಯ ನಿರ್ವಹಣೆಗಾಗಿ ಯಾವ ಸಾಧನಗಳನ್ನವಲಂಬಿಸುತ್ತಾನೋ, ನಿರ್ದಿಷ್ಟವಾಗಿ ಯಾವ ಗ್ರಂಥಗಳನ್ನಾಶ್ರಯಿಸುತ್ತಾನೋ ಅವು ಯಾವ ಯಾವ ದುರ್ಗುಣಗಳನ್ನು ತೊರೆಯಬೇಕೋ, ದ್ವೇಷಗಳನ್ನು ಹೋಗಲಾಡಿಸಿಕೊಳ್ಳಬೇಕೋ ಅವನ್ನೇ ಪುನಃ ಪುನಃ ನೆನಪು ಮಾಡಿಕೊಡುವ, ಅದನ್ನೇ ದೃಢಗೊಳಿಸುವ ಕಾರ್ಯ ಮಾಡಿದರೆ ? ಭಗವದ್ಗೀತೆಯಲ್ಲಿ ಅಂಥ ಹಲವು ಉದಾಹರಣೆಗಳು ದೊರೆಯುತ್ತವೆ. ಒಂದೆಡೆ ದ್ವೇಷ–ತ್ವೇಷಗಳನ್ನು ಕೈಬಿಡು ಎನ್ನುತ್ತದೆ. ಇನ್ನೊಂದೆಡೆ ಗೀತೆ ಭವದ್ವೇಷಿಣಿ ಎಂದು ಭವವನ್ನುದ್ವೇಶಿಸು ಎನ್ನುತ್ತದೆ. ವಿನೋಬಾ ಸ್ವಲ್ಪ ಪಾಠಾಂತರ ಮಾಡಿ "ಭಯ ದ್ವೇಷಿಣಿ ಎಂದಿದಾರೆ. ಹಾಗೆಂದರೆ ದ್ವೇಷಭಾವನೆ ಉಳಿಯಿತು; ಅದು ಗಟ್ಟಿ ಆಯಿತು. ಕಾಮವನ್ನು ಮೆಟ್ಟಿ ನಿಲ್ಲು ಎಂದು ಹೇಳುತ್ತಾ ಆತ್ಮಕಾಮನಾಗು ಎಂದು ಆದೇಶಿಸುತ್ತದೆ. ಶತ್ರುತ್ವವನ್ನು ಬಿಡು, ವೈರಭಾವ ತೊರೆ ಎಂದು ಹೇಳಿ ಆತ್ಮವರಿಪು್ರರಾತ್ಮನ

ನಿನ್ನ ರಿಪು ಯಾರೆಂದು ತಿಳಿದುಕೋ ನಿನ್ನ ಶತ್ರು ನೀನೇ ಎಂದು ಜ್ಞಾಪಿಸುತ್ತದೆ. ಮತ್ತೊಂದು ಕಡೆ ನಿನ್ನ ವೈರಿ ಯಾರೆಂದು ಜ್ಞಾಪಿಸಿಕೊಟ್ಟು

ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಂ ॥

(ಗೀತೆ 3 : 37)

ಆವೃತಂ ಜ್ಞಾನಮೇತನ ಜ್ಞಾನಿನೋನಿತ್ಯ ವೈರಿಣಾ ।
ಕಾಮರೂಪೇಣ ಕಾಂತೇಯ..........

(ಗೀತೆ 3 : 39)

ರಜೋಗುಣದಿಂದ ಉದ್ಭವಿಸುವ ಕಾಮ ಕ್ರೋಧಗಳೆರಡೂ ಮಹಾ ಪಾಪಿಗಳು, ಇವೇ ನಿನ್ನ ವೈರಿಗಳು. ಈ ಕಾಮರೂಪಿ ಅಗ್ನಿ ನಿನ್ನ ನಿತ್ಯ ಶತ್ರು ಎಂದು ನೆನಪು ಮಾಡಿಕೊಟ್ಟು ಕೊನೆಯಲ್ಲಿ

ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಂ ।

(ಗೀತೆ 3 : 43)

ಈ ದುರ್ಜಯ ಶತ್ರುವನ್ನು ಸಂಹರಿಸು ಎಂದು ಜ್ಞಾಪಿಸಿ ಸಂಹಾರ ಸಭ್ಯತೆಯನ್ನು ರೂಢಿಸಿಕೊಳ್ಳುವಂತೆ ಪ್ರೇರೇಪಿಸುತ್ತದೆ. ಹೀಗೆ ಎಲ್ಲೆಲ್ಲೂ ಯಾವ ಯಾವ ಅವಗುಣ, ಭಯ, ವೈರ, ದ್ವೇಷ, ಸಂಹಾರ ಮುಂತಾದವನ್ನು ಕೈಬಿಡಬೇಕೋ ಅವನ್ನೇ ನಿಯೋಜಿಸಿ ಮೇಲೇರಲು ಹೇಳಿದರೆ ಅವನ್ನೇ ದೃಢಗೊಳಿಸಿದಂತಾಗುತ್ತದೆ ಎಂಬ ಶಂಕೆ ಹುಟ್ಟುವಂತೆ ಮಾಡುತ್ತದೆ. ಇದರ ಸಮಾಧಾನ ಹೇಗೆ ? ಗೂಡಾರ್ಥವೇನು ? ಈ ಭಾಷಾ ಪ್ರಯೋಗವೇಕೆ ? ಇವೇ ಮುಂತಾದ ಪ್ರಶ್ನೆಗಳಿಗೆ ಗೀತೆಯು ಈ ಭಾಷಾ ಪ್ರಯೋಗ ಇಂಬುಗೊಡುತ್ತದೆ. ಯಾವ ಯಾವ ಭಯ. ವೈರಭಾವ ದ್ವೇಷಗಳನ್ನು ತ್ಯಜಿಸಬೇಕೋ ಅವನು ತನ್ನ ಒಳಗಣ ಶತ್ರುಗಳ ವಿರುದ್ಧ ಹೋರಾಡಲು ನಿಯೋಜಿಸುವ ವಿಧಾನದಲ್ಲೇ ಅವು ಗಟ್ಟಿಯಾಗಿ ಬೇರು ಬಿಟ್ಟು ಬಲಿತು ನಿಂತರೆ ಏನು ಗತಿ ? ಇದು ಈ ಎಲ್ಲ ಪ್ರಶ್ನೆಗಳ ಪ್ರಶ್ನೆಯಾಗಿ ಮುಂದೆ ನಿಲ್ಲುತ್ತದೆ ಮತ್ತು ಅದಕ್ಕೆ ಸೂಕ್ತ ಸಮಾಧಾನ ಬಯಸುತ್ತದೆ.

ನನ್ನಲ್ಲಿ ಕೋಪ, ಕ್ರೋಧ, ವೈರಭಾವ, ದ್ವೇಷ. ಮತ್ಸರ, ಮೋಸ ಲೋಭ ಇತ್ಯಾದಿ ದುರ್ಗುಣಗಳಲ್ಲಿ ಕೆಲವು ಹೆಚ್ಚು ಕಡಿಮೆ ಪ್ರಮಾಣದಲ್ಲಿ ಇವೆ. ಅವೂ ಮತ್ತು ಕೆಲವು ಸದ್ಗುಣಗಳೂ ಸೇರಿ ನಾನು ಎಂಬ ವೈಶಿಷ್ಟ್ಯ ವ್ಯಕ್ತಿಯಾಗಿದ್ದೇನೆ. ಒಟ್ಟಿನಲ್ಲಿ ಗುಣಾವಗುಣಗಳ ಮೂಟೆ ನಾನು,

ಗುಣಾವಗುಣಗಳ ಪ್ರಮಾಣ ಬದಲಾಗಿ ಇನ್ನುಳಿದ ವ್ಯಕ್ತಿಗಳಾಗಿದಾರೆ. ಪ್ರತಿಯೊಬ್ಬರಲ್ಲೂ ಈ ಪ್ರಮಾಣ ಬದಲಾಗಿಯೇ ಇರುತ್ತದಾದ್ದರಿಂದ ಪ್ರತಿಯೊಬ್ಬರೂ ವಿಶಿಷ್ಟ ವ್ಯಕ್ತಿಯೇ. ಒಂದು ಕಡೆ ಗುಣಗಳನ್ನು ವರ್ಧಿಸುತ್ತಾ ಇನ್ನೊಂದೆಡೆ ಅವಗುಣಗಳ ಕಡೆ ಗಮನ ಕೊಡದೆ ವ್ಯವಹರಿಸುತ್ತಾನೆ. ನನ್ನ ಸುತ್ತಲ ಜನ ನನ್ನ ಗುಣಗಳನ್ನು ಮೆಚ್ಚಿ ಅವಗುಣಗಳನ್ನು ಮನ್ನಿಸುತ್ತದೆ. "ಎಲ್ಲವೂ ಚನ್ನಾಗಿದೆ, ಒಳ್ಳೆ ವ್ಯಕ್ತಿತ್ವವೇ ಸರಿ. ಈ ಕೆಲವು ದುರ್ಗುಣಗಳು ಇಲ್ಲದೇ ಹೋಗಿದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದು ನನ್ನ ದುರ್ಗುಣಗಳನ್ನು ಗೌಣವಾಗೆಣಿಸುತ್ತದೆ. ಅಥವಾ ಆ ದುರ್ಗುಣಗಳ ಕಾರಣ ಇವನು ಮುಂದೆ ಹೋಗಲಿಲ್ಲ; ಇವನ ವ್ಯಕ್ತಿತ್ವ ಬೆಳೆಯದೆ ಉನ್ನತಿ ನಿಂತಿತ್ತು ಎನ್ನುತ್ತದೆ. ನನ್ನ ವಿಷಯದಲ್ಲಿ ಅಲ್ಪಸ್ವಲ್ಪ ಸಹಾನುಭೂತಿಯನ್ನಿರಿಸಿಕೊಳ್ಳುತ್ತದೆ; ಆಗಾಗ್ಗೆ ಅದನ್ನು ತೋರಿಸುತ್ತಲೂ ಇದ್ದೀತು. ಆದರೆ ಯಾವಾಗ ನನ್ನ ದುರ್ಗುಣಗಳು ಹೆಡೆ ಬಿಚ್ಚುತ್ತವೋ ಉಪದ್ರವಕಾರಿಯಾಗುತ್ತವೋ ಆಗ ಅದೇ ಜನ ನನ್ನಲ್ಲಿರುವ ದುರ್ಗುಣಗಳನ್ನು ಶಪಿಸುತ್ತಾ, ನನ್ನ ಗುಣಗಳ ಕಡೆ ನೋಡುವುದನ್ನು ಕೈಬಿಟ್ಟು, ಈ ದುರ್ಗುಣಗಳಿಂದ ಅವನು ಹಾಳಾದ ಎನ್ನತೊಡಗುತ್ತದೆ. ನನ್ನ ವಿಷಯದಲ್ಲಿ ಇದ್ದ ಅಷ್ಟಿಷ್ಟು ಮೆಚ್ಚಿಗೆಯೂ ಮಾಯವಾಗಿ ಸಹಾನುಭೂತಿಯೇ ಇಲ್ಲದಾಗುತ್ತದೆ. ಆ ನಾನು ಮಾತ್ರ ಢಂಬಾಚಾರಿಯಾಗಿ ನನ್ನತನವನ್ನು ಸಮರ್ಥಿಸಿಕೊಳ್ಳುತ್ತಾ, ಆತ್ಮ ನಿರೀಕ್ಷಣೆ ಮಾಡಿಕೊಳ್ಳದೆ, ನಾನಾಗಿಯೇ ಉಳಿದು ಮುಂದುವರಿಯುತ್ತೇನೆ. "ಹುಟ್ಟುಗುಣ ಸುಟ್ಟರೂ ಹೋಗದು" ಎನ್ನುವ ಲೋಕೋಕ್ತಿಗೆ ತಕ್ಕಂತೆ ನನ್ನ ವರ್ತನೆ ಮುಂದುವರಿಯುತ್ತದೆ

ನನ್ನನ್ನು ಸುಟ್ಟರೂ ನಾನು ಹೇಗೆ ಸುಟ್ಟು ಹೋಗುವುದಿಲ್ಲವೋ ಹಾಗೆಯೇ ನನ್ನಲ್ಲಿರುವ ಗುಣಗಳೂ ಸುಟ್ಟುಹೋಗದೆ ನನ್ನನ್ನು ಬಿಟ್ಟುಹೋಗುತ್ತವೆ. ಅವು ಎಲ್ಲಿಂದ ನನ್ನಲ್ಲಿ ಬಂದು ಸೇರಿದ್ದವೋ ಅಲ್ಲಿಗೇ ಹಿಂತಿರುಗುತ್ತವೆ. ಇಲ್ಲಿ ಒಂದು ಉಪನಿಷತ್ ಶ್ಲೋಕವನ್ನು ಸ್ಮರಿಸಿಕೊಳ್ಳಬೇಕು:–

ಗತಾ: ಕಲಾ: ಪಂಚದಶಾ ಪ್ರತಿಷ್ಠಾ:ದೇವಾಶ್ಚ ಸರ್ವೆ ಪ್ರತಿದೇವತಾಸು
ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೆವ್ಯಯ ಸರ್ವ ಏಕೀಭವಂತಿ

(ಮುಂಡಕ : 51)

ನನ್ನ ಮೃತ್ಯುವಿನ ನಂತರ ನನ್ನಲ್ಲಿದ್ದ ಹದಿನೈದು ತತ್ವಗಳು ಹೇಗೆ ತಮ್ಮ ಮೂಲ ಸ್ರೋತಗಳಿಗೆ ಹಿಂತಿರುಗುತ್ತವೋ ಹಾಗೆಯೇ ಗುಣಾವ

ಗುಣಗಳು ಪ್ರಕೃತಿಯಿಂದ ಬಂದವಾಗಿ ಅಲ್ಲಿಗೇ ಮರಳುತ್ತವೆ. ಅವು ನನ್ನನ್ನೇನೋ ಬಿಟ್ಟುಹೋದವು; ಆದರೆ ನಾಶವಾಗಲಿಲ್ಲ. ವಸ್ತುವಿನ ಸೃಷ್ಟಿಯೂ ಇಲ್ಲ, ನಾಶವೂ ಇಲ್ಲ. ಬದಲಾವಣೆ ಅಥವಾ ರೂಪಾಂತರ ಮಾತ್ರ ಸಾಧ್ಯ. ಉಷ್ಣಬಲ ಕ್ರಿಯಾ ಶಾಸ್ತ್ರದ (ಥರ್ಮೋಡೈನಾಮಿಕ್ಸ್‌ನ) ಎರಡನೆಯ ಸಿದ್ಧಾಂತಕ್ಕನುಸಾರ ಈ ಗುಣಾವಗುಣಗಳನ್ನು ನಾನು ಸೃಷ್ಟಿಸುವುದೂ ಇಲ್ಲ, ನಾಶಗೊಳಿಸುವುದೂ ಇಲ್ಲ. ಉಪನಿಷತ್ ತನ್ನ ಗೂಢಭಾಷೆಯಲ್ಲಿ ಇವೇ ಸಿದ್ಧಾಂತವನ್ನು ನಿರೂಪಿಸಿದೆ. ಅದಕ್ಕನುಸಾರ ನಾನು ಅವಕ್ಕೊಂದು ಯೋಗ್ಯದಿಶೆ ನೀಡಿ ಅವನ್ನು ನನ್ನ ಮಹತ್ಕಾರ್ಯ ಮತ್ತು ಮಹತ್ಸಾಧನೆಗಳಿಗೆಲ್ಲ ನಿಯೋಜಿಸಬಲ್ಲೆ. ಅಷ್ಟು ಮಾಡಿದೆನೋ ಅವುಗಳ ರೂಪಾಂತರವಾದಂತೆಯೇ. ಅವುಗಳಲ್ಲಿ ಬದಲಾವಣೆ ತಂದ ಹಾಗಾಯಿತು. ಹಾಗೆ ರೂಪಾಂತರಗೊಂಡ ಅವಗುಣಗಳು ಅವಗುಣಗಳಾಗಿ ಉಳಿಯಲಾರವು. ಅವುಗಳ ದಿಶೆ ನನ್ನ ಕಡೆ, ಪ್ರಯೋಗ ನನ್ನ ಮೇಲೆ. ಅದಕ್ಕಾಗಿ ಗೊತ್ತುಮಾಡಿದ ಕಾರ್ಯ ನನ್ನೊಳಗಿನ ಶತ್ರುಗಳನ್ನು ದಮನಗೊಳಿಸಲೋಸುಗ ಹೋರಾಡುವುದು, ಉದ್ದೇಶ ನನ್ನ ಚಿತ್ತಶುದ್ಧಿ, ಆತ್ಮಶುದ್ಧಿ.

ವಸ್ತುವಿನ ಮತ್ತು ಶಕ್ತಿಯ ವರ್ಗಾವಣೆಯಾದಾಗ ನಷ್ಟ ಇದೆಯೆಂಬ ಮತ್ತೊಂದು ಸಿದ್ಧಾಂತಕ್ಕನುಸಾರ ಈ ಅವಗುಣಗಳು ತಮ್ಮ ಕೆಲವು ಗುಣಲಕ್ಷಣಗಳನ್ನು ಕಳೆದುಕೊಳ್ಳುತ್ತವೆ. ಅವಕ್ಕೆ ಇದು ನಷ್ಟವೇ; ಆದರೆ ತೋರಿಕೆಯ ನಷ್ಟವಷ್ಟೇ. ಯಾವುದನ್ನು ಕಳೆದುಕೊಳ್ಳಬೇಕೋ ಅವನ್ನೇ ಕಳೆದುಕೊಂಡು ರೂಪಾಂತರ ಹೊಂದಿದವು. ಅವುಗಳಲ್ಲಿ ಆದ ರೂಪಾಂತರದ ಫಲಿತವೇ ಉಪದ್ರವಕಾರಿಯಂತಿದ್ದ ಶತ್ರುವತ್ ಅವಗುಣಗಳು ಈಗ ಸದೃಶ ಪರಿವರ್ತನೆಗೊಳಗಾಗಿ ಪರಮ ಶ್ರೇಯಸ್ಕರವೆಂದೆನಿಸಿದುದು. ಗೀತೆ ಈ ಪ್ರಕ್ರಿಯೆಯನ್ನು 'ಗುಣಾತೀತ' ಪ್ರಕ್ರಿಯೆ ಎಂದಿದೆ. ಈ ಕೆಳಗಿನ ಶ್ಲೋಕ ಅದನ್ನು ಹೀಗೆ ವರ್ಣಿಸಿದೆ:-

> ಗುಣಾನೇತಾನತೀತ್ಯ ತ್ರೀಂದೇಹೀ ದೇಹಸಮುದ್ಭವಾನ್ ।
> ಜನ್ಮಮೃತ್ಯುಜರಾದುಃಖೈರ್ವಿಮುಕ್ತೋಽಮೃತಮಶ್ನುತೇ ॥

ಗೀತೆ (ಅಧ್ಯಾಯ ೧೪:೨೦)

ಇದು ಈ ಮೊದಲು ಉದಹರಿಸಿದ ಮುಂಡಕೋಪನಿಷತ್ತಿನ ಶ್ಲೋಕದ ಮುಖ್ಯ ಆಶಯಗಳನ್ನು ಪ್ರತಿಧ್ವನಿಸುತ್ತದೆ. ಐದು ಜ್ಞಾನೇಂದ್ರಿಯ, ಐದು ಕರ್ಮೇಂದ್ರಿಯ, ಪಂಚಭೂತಗಳು ಕೂಡಿ ಈ ಹದಿನೈದು ತತ್ವ: ಮನ, ಬುದ್ಧಿ, ಅಹಂಕಾರ ಮತ್ತು ಐದು ವಿಷಯಗಳು ಒಟ್ಟು ೨೩ ತತ್ವಗಳು, ಪಿಂಡರೂಪಿ ಶರೀರ ಎನ್ನುವುದು ಪ್ರಕೃತಿಯಿಂದ ಉತ್ಪನ್ನವಾದ ಗುಣಗಳು ಕಾರಣದಿಂದಾಗಿ, ಕಾರಣರೂಪಿ ಗುಣಗಳನ್ನು ದಾಟಿ, ಮೀರಿ ಅವುಗಳಾಚೆ ಹೋಗಬೇಕು.

ಅಥವಾ ಉಲ್ಲಂಘಿಸಿ (ಉತ್= ಮೇಲೆ, ಲಂಘನ= ಜಿಗಿಯುವುದು) ಅತ್ತ ಹೋಗಬೇಕು. ಇದು ನಡೆಯಬೇಕಾದ ಪ್ರಕ್ರಿಯೆ. ತತ್ಫಲವಾಗಿ ಆ ಗುಣಾವಗುಣಗಳಲ್ಲಿ ಗುಣಾತ್ಮಕ ಪರಿವರ್ತನೆಯಾಗಿಬಿಡುತ್ತದೆ. ಹೀಗೆ ಬದಲಾದ ಗುಣಗಳ ಕಾರ್ಯ ನೋಡಿ :

ನಾನು ಕಾಮಿ. ನನ್ನಲ್ಲಿರುವ ಕಾಮವನ್ನು ದಹಿಸಲಾರೆ. ಅವಗುಣದ ದಿಕ್ಕು ಮತ್ತು ಉದ್ದೇಶ್ಯ ಬದಲಿಸಿ ಆತ್ಮಕಾಮನಾಗು ಎಂದೆ. ಅದೇ ಕಾಮ ನನ್ನ-ತನ್ನ ಜನಗಳ ಮೇಲೆ, ಸುತ್ತಲ ಸಮಾಜದ ಮೇಲೆ ಪ್ರಯೋಗವಾಗಿದ್ದರೆ, ಪ್ರವಹಿಸಿದ್ದರೆ ಅವುಗಳ ಗತಿ ಏನಾಗುತ್ತಿತ್ತು ? ನನ್ನಲ್ಲಿ ಶತೃತ್ವ ಇದೆ. ನನ್ನ-ತನ್ನ ಜನ ಸುತ್ತಲ ಸಮಾಜದ ಮೇಲೆ ಶತ್ರುತ್ವ ಸಾಧಿಸಿದ್ದರೆ? ಅದರ ಬದಲು 'ಆತ್ಮೈವ ರಿಪುರಾತ್ಮನ' : ಎಂದು ತಿಳಿದು ನನ್ನೊಳಗಣ ಶತ್ರುಗಳೊಡನೆ ಶತ್ರುತ್ವ ಸಾಧಿಸಲು ಅವನ್ನು ತೊಡಗಿಸಿ ಹೋರಾಡುತ್ತಿದ್ದೇನೆ. ಶತೃತ್ವವೇನೋ ಅದೇ. ಆ ಗುಣ ಹಾಗೇ ಇದ್ದು, ತನ್ನ ಸ್ವಭಾವಕ್ಕನುಗುಣ ಕಾರ್ಯ ಮಾಡುತ್ತಾ, ಅದರ ದಿಶೆ, ಉದ್ದೇಶ್ಯ ಮತ್ತು ಪ್ರಯೋಗಗಳು ಬದಲಾದ ಮಾತ್ರದಿಂದ ಗುಣಾತ್ಮಕ ಪರಿವರ್ತನೆ ತಂದುಕೊಂಡು ಮೊದಲು ತಮ್ಮಲ್ಲಿಯೇ ರೂಪಾಂತರ ಸಾಧಿಸಿಬಿಟ್ಟವು. ಹಾಗೆಯೇ ನನ್ನಲ್ಲಿ ತಾರತಮ್ಯ ಮಾಡುವ ದೋಷ ಇದೆ. ಈಗ ಅದನ್ನು ನಿತ್ಯಾನಿತ್ಯ ವಸ್ತುಗಳ ವಿವೇಕ ಜ್ಞಾನ ಪಡೆಯಲು ನಿಯೋಜಿಸಿದೇನೆ. ಆದರಿಂದ ತಾರತಮ್ಯಗುಣದ ದಿಶೆ, ಪ್ರಯೋಗ ಮತ್ತು ಉದ್ದೇಶ್ಯ ಬದಲಾಗಿ ಒಂದು ಊರ್ಧ್ವಗತಿಯ ಸಾಧನೆಯ ಕಡೆ ಅದನ್ನು ಹೊರಳಿಸಿ ಒಯ್ದು ಬಳಸಿದಂತಾಯಿತು. ಸಾರಾಂಶ, ನಾನು ಕಾಮ, ಶತೃತ್ವ, ತಾರತಮ್ಯ ಇತ್ಯಾದಿಯನ್ನು ತುಳಿದು ನಾಶ ಮಾಡಲಿಲ್ಲವಲ್ಲ, ಕೊಲ್ಲಲಿಲ್ಲವಲ್ಲ ? ಅವನ್ನು ನನ್ನ ಇಚ್ಛಾನುವರ್ತಿಗಳನ್ನಾಗಿ ಮಾಡಿಕೊಂಡೆ. ಅರ್ಥಾತ್ ಉನ್ನತೀಕರಿಸಿದೆ. ಈ ಎಲ್ಲ ಅವಗುಣಗಳಿಗೆ ನಾನು ಅಧೀನನಾಗಿ, ವಶನಾಗಿ ಗುಲಾಮನಾಗುವ ಬದಲು ನಾನು ಮೇಲುಗೈ ಸಾಧಿಸಿ ನನ್ನ ನಿಯಂತ್ರಣಕ್ಕೊಳಪಡಿಸಿದೆ. ನನ್ನ ಬಿಗಿಮುಷ್ಟಿಯೊಳಗೆ ತಂದು ನನ್ನ ಪ್ರಭುತ್ವ ಸಾಧಿಸಿದೆ. ಅವನ್ನು ಬೇಕಾದಂತೆ, ಬೇಕಾದ ಕಡೆ, ಬೇಕಾದ ಕಾರ್ಯಕ್ಕೆ ಬಳಸುವಷ್ಟು ಸಾಮರ್ಥ್ಯಪಡೆದೆ. ದಿಶೆ, ಪ್ರಯೋಗ, ಉದ್ದೇಶ್ಯ, ನಿಯಂತ್ರಣ ಈ ನಾಲ್ಕೂ ಬದಲಾಗಿ ನನ್ನ ದುರ್ಗುಣಗಳಲ್ಲಿ ಅಭೀಷ್ಟ ಪರಿವರ್ತನೆ ಮತ್ತು ಪರಿಣಾಮವನ್ನು ತಂದವು. ಅದೇ ರೀತಿ ಕ್ರೋಧ, ಮದ, ಮೋಹ, ಆಸಕ್ತಿ, ಲೋಭ, ಆಸೆ ಇದೇ ರೀತಿ ಪರಿವರ್ತನೆಯಾದವು. ಪರಿವರ್ತಿತ ಅವಗುಣಗಳು ಅವಗುಣಗಳೆನಿಸದೆ ನನ್ನ ಸತ್ಪ್ರೋತ್ಕರ್ಷಕ್ಕೆ ಸಾಧನವಾದ, ಊರ್ಧ್ವಪಾತಗೊಂಡ ಅಸ್ತ್ರಗಳೊ ಎಂಬಂತಾದವು. ಆದುದ

ರಿಂದ ಆ ಅವಗುಣಗಳು ಅದೇ ಹಳೇ ರೂಪದಲ್ಲಿ ದೃಢವಾಗಿ ನನ್ನಲ್ಲೇ ಉಳಿದು ಬಿಡುವ ಭಯ ನನಗಿಲ್ಲ. ಏಕೆಂದರೆ ಅವು ನನ್ನ ಹಿಡಿತದಲ್ಲಿವೆ, ಊರ್ಧ್ವಗತಿ ಪಡೆದಿವೆ.

ಅವು ಗುಣಗಳ ಮೇಲೆ ಪ್ರತ್ಯೇಕ ಲಗಾಮು ಹಾಕುವ ಮಾತೆಲ್ಲಿ ಬಂತು ? ಅವುಗಳ ದಿಶೆ, ಪ್ರಯೋಗ ಮತ್ತು ಉದ್ದೇಶ್ಯ ಬದಲಿಸಿ ಬದಲಾದ ಕಡೆ ತಿರುಗಿಸುವ ಪ್ರಯತ್ನವೇ ನಿಯಂತ್ರಣ ಸಾಧಿಸುವ ಪ್ರಕ್ರಿಯೆ. ಅದಕ್ಕೆ ಬೇಕಾದುದು ಉತ್ತಮ ಕುಶಲ ಸಾರಥಿ, ಹದವಾದ ಮನಸ್ಸು ಹಾಗೂ ಸಂಕಲ್ಪ ಶಕ್ತಿ. ಕೆಳಗಿನ ಮಂತ್ರಗಳು ಇದನ್ನೇ ಹೇಳುತ್ತವೆ. ಈ ಪ್ರಾರ್ಥನಾರೂಪದ ಮಂತ್ರಗಳ ಆಶಯದಿಂದ ಲೇಖನದ ಸಮಾಪ್ತಿ. ಯಾವ ಮನುಷ್ಯನಲ್ಲಿ ಬುದ್ಧಿರೂಪಿ ಚಾಣಾಕ್ಷ ಹಾಗೂ ದಕ್ಷ ಸಾರಥಿ ಇದ್ದಾನೊ ಮತ್ತು ಮನರೂಪಿ ಲಗಾಮುಗಳ ಮೇಲೆ ಅವನಿಗೆ ಪೂರ್ಣ ಹಿಡಿತವಿದೆಯೊ ಅವನೇ ಸಂಸಾರರೂಪಿ ಮಾರ್ಗ ಕ್ರಮಿಸಿ ಅಂತಿಮ ಗುರಿಯಾದ ಪರಮಪದವನ್ನು ಸೇರುತ್ತಾನೆ.

ವಿಜ್ಞಾನ ಸಾರಥಿರ್ಯಸ್ತುಮನಃಪ್ರಗ್ರಹವಾನ್ ನರ ।

ಸೋಽಧ್ವನ : ಪಾರಮಾಪ್ನೋತಿ ತದ್ವಿಷ್ಣೋ : ಪರಮ್ ಪದಂ ॥

ಸುಷಾರಥೀರಶ್ವಾ ನಿವ: ಯನ್ಮನುಷ್ಯಾನ್
ನೇ ನಿಯತೆ ಅಭೀಶುಭೀ : ವಾಜಿನಾಽಽ ಇವ
ಹೃತ್ಪ್ರತಿಷ್ಠಂಯದಜಿರಂಜವಿಷ್ಠಂ
ತನ್ಮೆ ಮನಃ ಶಿವಸಂಕಲ್ಪಮಸ್ತು ಃ ॥ (ಯಜುರ್ವೇದ 34:6)

ನನ್ನ ಯಾವ ಮನಸ್ಸು ಕಡಿವಾಣಗಳಿಂದ ಕುದುರೆಗಳನ್ನು ಪತೋಟಿಯಲ್ಲಿಡುವಂತೆ ಅಥವಾ ಅವನ್ನು ಅಂಕೆಯಲ್ಲಿಡುವ ಸಾರಥಿಯಂತೆ ಬಹುವಾಗಿ ಅತ್ತ-ಇತ್ತ ಕೊಂಡೊಯ್ಯುತ್ತದೋ, ಯಾವುದು ಹೃದಯದಲ್ಲಿ ಪ್ರತಿಷ್ಠಿತವಾಗಿ ಗತಿಶೀಲವಾಗಿ ಮತ್ತು ಅತ್ಯಂತ ವೇಗಶಾಲಿಯಾಗಿದೆಯೋ ಆ ನನ್ನ ಮನಸ್ಸು ಮಂಗಳಕರ ಸಂಕಲ್ಪಗಳನ್ನು ಮಾಡುವಂತಾಗಲಿ.

ಉತ್ತಮ ಸಾರಥಿಯಾದವನು ತನ್ನ ಕಾರ್ಯನಿರ್ವಹಣೆಗಾಗಿ ಅನಾವಶ್ಯಕ ದೇಹ ದಂಡನೆಗೆ ತೊಡಗುವುದಿಲ್ಲ:-

ನ ಚ ಪ್ರಮಾದಾದ್ ತಪಸೋ ವಾಪ್ಯಲಿಂಗಾತ್

ಪ್ರಮಾದಕರ ಆಚರಣೆ, ಅಶಾಸ್ತ್ರೀಯ ನಿರರ್ಥಕ ತಪಸ್ಸು ಇತ್ಯಾದಿ ಮಾರ್ಗಗಳನ್ನು ತೊರೆದು ಅದರ ಬದಲು ,

ಏತೈಃ ಉಪಾಪ್ಯೈಃ ಯತತೈ ಯಸ್ತು ವಿದ್ವಾಂಸ್....

ಮೇಲೆ ಹೇಳಿದ ಪ್ರಕ್ರಿಯೆಯಿಂದ ದೋಷ ನಿವಾರಣೆ ಮಾಡಿಕೊಂಡು ಪರಮ ಲಕ್ಷ್ಯ ಸಾಧಿಸುವ ಪ್ರಯತ್ನಶೀಲನಿಗೆ ಮಾತ್ರ ಅದು ಲಭ್ಯ.

ಗೀತೆಯೂ ಅಶಾಸ್ತ್ರೀಯ, ಘೋರ ತಪ ಆದಿಯನ್ನು ಖಂಡಿಸಿದೆ. ಅದು ಉತ್ತಮ ಸಾರಥಿಯ ಲಕ್ಷಣವೂ ಅಲ್ಲ. ಕಾರ್ಯವೂ ಅಲ್ಲ. ಅದಕ್ಕಾಗಿಯೇ ಉಪಾಯ ಶಬ್ದ ಪ್ರಯೋಗವಾಗಿದೆ. ಅದರ ನೇರ ಆಶಯ ಮೇಲೆ ವಿವರಿಸಿದ ಪ್ರಕ್ರಿಯೆಯ ಬಳಕೆ.

ಯಾವಾಗ ದಿಶೆ, ಪ್ರಯೋಗ, ಉದ್ದೇಶ್ಯ, ಲಕ್ಷ್ಯವೆಲ್ಲ ಭಿನ್ನವಾಗಿ ಗುಣಾವಗುಣಗಳ ಬಳಕೆಯಾದವೋ ಆಗ ಆ ಪರಿವರ್ತಿತ ಅವಗುಣಗಳು ದೃಢವಾಗಿ ನಿಂತರೆ ಅದಕ್ಕಾಗಿ ಚಿಂತಿಸಬೇಕಾಗಿಲ್ಲ, ಭಯಪಡಬೇಕಾಗಿಲ್ಲ. ಏಕೆಂದರೆ ತನ್ನೊಳಗೆ ಬಂಧಿಸಿಟ್ಟಿದ್ದೇವೆ, ಅವನ್ನು ರೂಪಾಂತರಿಸಿದ್ದೇವೆ, ಉನ್ನತೀಕರಿಸಿ ಮಹೋನ್ನತ ಕಾರ್ಯಕ್ಕೆ ಹಚ್ಚಿದ್ದೇವೆ. ಇಷ್ಟಾದಮೇಲೆ ಭಯವಿನ್ನೇನು ? ಅವು ಅಲ್ಲಿಯೇ ಆಯಾಯಾ ಗೊತ್ತಾದ ಕಾರ್ಯಗಳಲ್ಲಿ ನಿರಂತರವಾಗಿ ನಿಮಗ್ನವಾಗಿ ದೃಢವಾಗಿ ಸ್ತಂಭಿಸಲ್ಪಟ್ಟಿರಲೆಂಬುದೇ ಅಭಿಪ್ರಾಯ. ಅವು ಆ ಕಾರ್ಯಗಳಿಂದ ವಿಚಲಿತವಾಗದಿರದಂತೆ ಸುರಕ್ಷಿತಗೊಳಿಸಿಕೊಳ್ಳುವುದೇ ಆಗಬೇಕಾದ ಯತ್ನ, ತಪಸ್ಸು ಮತ್ತು ಗೀತೋಪನಿಷತ್ತುಗಳು ತೋರಿಸಿರುವ ಉಪಾಯ, ಪರಮ ಪವಿತ್ರ ಯುಕ್ತಿ.

ಲೇಖನದ ಪ್ರಾರಂಭದಲ್ಲಿ ಎತ್ತಿದ ಪ್ರಶ್ನೆಗಳಿಗೆ ಕಿಂಚಿತ್ತಾದರೂ ಉತ್ತರ ಮತ್ತು ಸಮಾಧಾನ ದೊರೆತಂತಾಯಿತು.★

ಜನಪದ ಸಂಗತಿ

೮ ನೇ ಪುಟದಿಂದ

ಮೇಲ್ಕಾಣಿಸಿದ ಸಲಹೆಗಳು ಕೇವಲ ಸಾಂಕೇತಿಕ ಮಾತ್ರ; ಇನ್ನೂ ಹತ್ತಾರು ಸಲಹೆಗಳನ್ನು ಕಂಡುಕೊಳ್ಳಬಹುದಾಗಿದೆ.

ಅಂತಿಮವಾಗಿ ದೇಶದ ಕೊರಳಿಗೆ ಸುತ್ತಿಕೊಂಡಿರುವ ಭ್ರಷ್ಟಾಚಾರವೆಂಬ ವಿಷಸರ್ಪದಿಂದ ಬಿಡುಗಡೆ ಹೇಗೆ ಪಡೆಯಬೇಕೆಂಬ ಬಗ್ಗೆ ಪ್ರತಿಯೊಬ್ಬ ಜಾಗೃತ ಭಾರತೀಯನೂ ಯೋಚನೆ ಮಾಡಬೇಕು ಮತ್ತು ಅದರ ನಿವಾರಣೆ ಯತ್ತ ನಿಷ್ಠೆಯಿಂದ ಪ್ರಯತ್ನ ಮಾಡಬೇಕು. ಭ್ರಷ್ಟಾಚಾರವನ್ನು ಒಂದು ರಾಷ್ಟ್ರೀಯ ಸಮಸ್ಯೆಯೆಂದೇ ಭಾವಿಸಬೇಕು. ★

–ಸುರೇಂದ್ರ ಕೌಲಗಿ

ಜೀವನ ಶಿಕ್ಷಣದ ಸಾಮಾಜಿಕ, ನೈತಿಕ ರೂಪ

– ಆಚಾರ್ಯ ಕೃಪಲಾನಿ

(ಶಿಕ್ಷಣ ಕ್ಷೇತ್ರ ಎಂದಿನಿಂದಲೂ ವಿಮರ್ಶೆಗೆ ಒಳಗಾಗುತ್ತ ಬಂದಿರುವಂಥದು. ಶಿಕ್ಷಣವು ಅನ್ನ ಕಾಯಕದ ಸುತ್ತ ಇರಬೇಕೆಂಬ ಗಾಂಧೀಜಿಯವರ ವಿಚಾರದ ಬೆಳವಣಿಗೆಯನ್ನು ಕೃಪಲಾನಿಯವರು ಇಲ್ಲಿ ದಾಖಲಿಸಿದ್ದಾರೆ. ಗುರಿ ಮತ್ತು ಗುರು ಇಲ್ಲದ ಇಂದಿನ ಶಿಕ್ಷಣ ಪದ್ಧತಿಯ ವಿರುದ್ಧವಾಗಿ ಅನ್ನಕಾಯಕದ ಶಿಕ್ಷಣವು ಇಂದಿಗೂ ಪ್ರಸ್ತುತವಾಗಿದೆಯೆಂಬುದು ೬೨ ವರ್ಷಗಳ ಹಿಂದೆ ೧೯೩೮ ರಲ್ಲಿ ಗಾಂಧೀಜಿ ಹೇಳಿದ್ದರೆಂಬುದು ಆ ವಿಚಾರದ ಆಕರ್ಷಣೆ. ಇಲ್ಲಿ ಆ ವಿಚಾರಗಳನ್ನು ಕ್ರಮಶಃ ಕೊಡಲಾಗುತ್ತಿದೆ. ಇದು ೮ಂಎನೆಯ ಕಂತು. -ಸಂ)

ಆಧುನಿಕ ಕಾಲದ ಸಾಮಾಜಿಕ ಪರಿವರ್ತನೆಗಳಿಗನುಗುಣವಾಗಿ ಯುರೋಪಿನಲ್ಲಿ ಬಂತು ಶಿಕ್ಷಣ ಪದ್ಧತಿ. ಸುಧಾರಣೆಯ ಚಳುವಳಿ, ಪುನರುಜ್ಜೀವನದ ಚಳುವಳಿಗಳ ಫಲವಾಗಿ ಬಂದ ಆರ್ಥಿಕ ಮತ್ತು ರಾಜಕೀಯ ವಿಚಾರಗಳೇ ಅದಕ್ಕೆ ಕಾರಣ ಎನ್ನಬಹುದು. ಧಾರ್ಮಿಕ, ಆರ್ಥಿಕ, ರಾಜಕೀಯ ಚಳುವಳಿಗಳ ಜೊತೆಯಲ್ಲೇ ಪ್ರಕೃತಿ ಜ್ಞಾನದ ಅಧ್ಯಯನವೂ ಮುಂಬರಿಯಿತು. ಪ್ರಕೃತಿ ವಿಜ್ಞಾನದಲ್ಲಿ ವ್ಯಕ್ತಿಯೇ ಪ್ರಧಾನ. ಅರ್ಥಶಾಸ್ತ್ರ, ರಾಜ್ಯಶಾಸ್ತ್ರಗಳಂಥ ಸಮಾಜವಿಜ್ಞಾನ ಶಾಸ್ತ್ರಗಳು ಸಮಾಜ ಹಿತವನ್ನು ಒತ್ತಿ ಹೇಳುತ್ತವೆ. ಎರಡಕ್ಕೂ ಶಿಕ್ಷಣದಿಂದ ಏನು ಲಾಭ, ಏನು ಪ್ರಯೋಜನ ಎಂಬುದೇ ದೃಷ್ಟಿ. ವೈಜ್ಞಾನಿಕ ಸಂಸ್ಥೆಗಳು, ಯಂತ್ರವಿದ್ಯಾ ಶಾಲೆಗಳು, ವಾಣಿಜ್ಯ ಸಂಸ್ಥೆಗಳು ಇಷ್ಟು ಹೆಚ್ಚಾಗಿ ಬೆಳೆದಿರಲು ಆಧುನಿಕ ವೈಜ್ಞಾನಿಕ – ಸಾಮಾಜಿಕ ಪ್ರವೃತ್ತಿಯೇ ಕಾರಣ. ಸಮಾಜದ ಆರ್ಥಿಕ, ರಾಜಕೀಯ, ಸಾಮಾಜಿಕ ಜೀವನದಲ್ಲಿ ಸರಿಯಾದ ಸ್ಥಾನ ಪಡೆಯುವಂತೆ ವ್ಯಕ್ತಿಯನ್ನು ತಯಾರು ಮಾಡುವುದೇ ಶಿಕ್ಷಣದ ಕೆಲಸ ಎಂದು ಕ್ರಮೇಣ ತಿಳಿಯಲಾಗಿದೆ. ಹಿಂದಿನಂತೆ ಆಧ್ಯಾತ್ಮ ಜೀವನಕ್ಕೆ, ಮುಕ್ತಿ ಸಂಪಾದನೆಗೆ ಸಿದ್ಧತೆಯಲ್ಲ; ವ್ಯಕ್ತಿಯನ್ನು ಪ್ರಬುದ್ಧ ಪ್ರಯೋಜನಪರ ನಾಗರಿಕನನ್ನಾಗಿ ಮಾಡುವುದು ಶಿಕ್ಷಣದ ಕೆಲಸ.

ಆಧುನಿಕ ಪ್ರಜಾತಂತ್ರಗಳು ಹುಟ್ಟಿ ಶಿಕ್ಷಣದ ಈ ದಾರಿ ಮತ್ತಷ್ಟು ದೃಢವಾಯಿತು. ಜನತೆಯ ಸರಕಾರ ತನ್ನ ಧಣಿಗಳಿಗೆ ವಿದ್ಯೆ ನೀಡಬೇಕು. ಇಂಗ್ಲೆಂಡಿನಲ್ಲಿ ಈ ಅಭಿಪ್ರಾಯ ಮೊದಲಾಯಿತು. ಅಮೆರಿಕಾದಲ್ಲಿ ಜೆಫರ್‌ಸನ್ ಪ್ರತಿಪಾದಿಸಿದ: 'ನನ್ನ ಮನಸ್ಸಿನಲ್ಲಿ ಸಿದ್ಧಾಂತ ಹೀಗಿದೆ:– ಜನತೆಯ ಕೈಯಲ್ಲಲ್ಲದೆ ನಮ್ಮ ಸ್ವಾತಂತ್ರ್ಯಕ್ಕೆ ಬೇರೆ ಉಳಿವಿಲ್ಲ; ಸ್ವಲ್ಪವಾದರೂ ಶಿಕ್ಷಣ ಪಡೆದ ಜನತೆಯಾಗಬೇಕು. ಒಂದು ಯೋಜನೆ ಮಾಡಿ ಇದನ್ನು ನಡೆಯಿಸಬೇಕಾದುದು

ರಾಜ್ಯದ ಕರ್ತವ್ಯ.' ಪ್ರಜಾತಂತ್ರ ಸುಗಮವಾಗಿ ನಡೆಯಲು ಸರ್ವತ್ರ ಸಾಮಾನ್ಯ ಶಿಕ್ಷಣ ಅವಶ್ಯಕ. ದಿನೇದಿನೇ ಬೆಳೆಯುತ್ತಿರುವ ಯಂತ್ರೋದ್ಯೋಗ ಗಿರಣಿಗಾರಿಕೆಗಳಿಗೆ ಬುದ್ಧಿವಂತರಾದ ಕೆಲಸಗಾರರೂ ದುಡಿತಗಾರರೂ ಬೇಕು. ಆದುದರಿಂದ ತನ್ನ ಕೆಲಸಕ್ಕಾಗಿಯೂ ಸಾರ್ವಜನಿಕ ಆವಶ್ಯಕತೆಗಾಗಿಯೂ ರಾಜ್ಯ ತನ್ನ ಪ್ರಜೆಗಳಿಗೆ ಶಿಕ್ಷಣ ಕೊಡಲೇಬೇಕು.

ಮೊದಲಿನ ಕಾಲದಿಂದಲೂ ಶಿಕ್ಷಣವೆಂದರೆ ಗುಣವಿಕಾಸವೆಂದೇ ಭಾವನೆ. ಆಧುನಿಕ ಕಾಲದಲ್ಲಿ ಧಾರ್ಮಿಕ ಗುಣಕ್ಕಿಂತ ಲೌಕಿಕ ಗುಣಕ್ಕೆ ಹೆಚ್ಚು ಪ್ರಾಧಾನ್ಯ ಬಂದಿದೆ. ಇದರಿಂದ ಮನುಷ್ಯನ ನೀತಿಯ ರೂಪು-ರಂಗು ಬದಲಾಗಿವೆ. ಅಪೌರುಷೇಯ, ಪ್ರಾಕೃತಿಕ- ಯಾವ ಧರ್ಮವೂ ಶಿಕ್ಷಣಕ್ಕೀಗ ಆಧಾರವಲ್ಲ. ವಿಜ್ಞಾನ ಸಮಾಜಶಾಸ್ತ್ರಗಳಿಂದ ಬಂದ ಏಕೈಕೋದ್ದೇಶ ಸಾಧಕವಾದ ಸಹಕಾರ, ಪರಸ್ಪರ ಸಹಕಾರದ ವಿಚಾರ ಈಗ ಶಿಕ್ಷಣದ ಆಧಾರ. ಎಂದರೆ, ಈ ಕಾಲದ ಶಿಕ್ಷಣ ನಾಗರಿಕತೆಗಾಗಿ. ತಾನು ಯಾವುದರ ಅಂಗವೋ ಆ ಸಮಾಜದ ಸೇವೆಗಾಗಿ ವ್ಯಕ್ತಿಯನ್ನು ಅಣಿ ಮಾಡುವುದು ಅದರ ಕೆಲಸ.

ಆಧುನಿಕ ಸಮಾಜಶಾಸ್ತ್ರದ ಇನ್ನೊಂದು ವಿಚಾರವನ್ನೂ ಶಿಕ್ಷಣ ನಡೆಸಬೇಕಾಗಿದೆ. ವ್ಯಕ್ತಿಯು ಜನಾಂಗದ ಸಾರಸಂಗ್ರಹ, ಜನಾಂಗದ ಸಂಸ್ಕೃತಿ ಮತ್ತು ಪ್ರಗತಿಗಳ ಉತ್ತಮ ಫಲ. ಸಮಾಜದ ಮನೋಧರ್ಮ ಅವನಲ್ಲಿ ಪ್ರತಿಬಿಂಬಿತವಾಗುತ್ತದೆ. ಹಿಂದಿನದೆಲ್ಲದರ ಉತ್ತರಾಧಿಕಾರಿ ಅವನು. ಈ ಸೊತ್ತನ್ನು ಕಳೆಯಲಾಗದು. ಅಷ್ಟೇ ಅಲ್ಲ, ತನ್ನ ತರುವಾಯ ಬರುವ ಪೀಳಿಗೆಗಳಿಗಾಗಿ ಅದಕ್ಕೆ ತನ್ನ ಸ್ವಂತ ಕಾಣಿಕೆಯನ್ನೂ ಅವನು ಸೇರಿಸಬೇಕು.

ವೈಜ್ಞಾನಿಕ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕಾಣಿಸಿಕೊಂಡ ಈ ವಿವಿಧ ಪ್ರವೃತ್ತಿಗಳೆಲ್ಲ ಆಧುನಿಕ ಶಿಕ್ಷಣ ವಿಚಾರದ ಮೇಲೆ ಪ್ರಭಾವ ಬೀರಿವೆ. ಈ ಹೊಸ ಆಸೆ, ಆಕಾಂಕ್ಷೆಗಳನ್ನು ಶಿಕ್ಷಣ ಈಡೇರಿಸಬೇಕೆಂದರೆ ಅದಕ್ಕೆ ತಕ್ಕ ಪದ್ಧತಿಯನ್ನು ಹುಡುಕಬೇಕು. ಆ ಪದ್ಧತಿ ಮನಃಶ್ಶಾಸ್ತ್ರ ವಿಜ್ಞಾನಗಳಿಗೆ ಸಮ್ಮತವಾಗಬೇಕು, ಕ್ರಿಯಾತ್ಮಕವಾಗಬೇಕು. ಬರೀ ಸಿದಾಂತದ ಬೋಧನೆಗಳಾದರೆ ಸಾಲದು. ಕೆಲಸ ಕ್ರಿಯೆ: ಪ್ರಯೋಗ ಇರಬೇಕು. ರೂಸೋ, ಪೆಸ್ಟಲಾಜಿ, ಹರ್ಬಟ್, ಫ್ರೂಬೇಲ್ ಇತ್ಯಾದಿ ಮೊದಲಿನ ಸಿದ್ಧಾಂತಿಗಳ ಸುಧಾರಕರು ಸಾಮಾಜಿಕ ಜೀವನದ ದೃಷ್ಟಿಯಿಂದ ಶಿಕ್ಷಣದ ಪದ್ಧತಿಯನ್ನು ವಿಮರ್ಶಿಸಿದರು. ಶಿಕ್ಷಣ ಶಾಸ್ತ್ರಕ್ಕಿಂತ ಅವರಿಗೆ ಸುಧಾರಣೆ ಹೆಚ್ಚಿನದು. ಸಕ್ರಿಯ ಸಮಾಜ ಸುಧಾರಕರಾಗಿ ಅವರು ಶಿಕ್ಷಣ ಪದ್ಧತಿಯ ಪ್ರಶ್ನೆಯನ್ನು ಬಿಡಿಸಲು ಯತ್ನಿಸಿದರು. ಅವರ ತರುವಾಯ ಬಂದವರೂ ಅದೇ ಜಾಡನ್ನು ತುಳಿದರು.

ಮುಂದಿನ ನಾಗರಿಕರು ಸಮಾಜದಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುವಂತೆ ತರಬೇತು ಮಾಡುವುದು ಶಿಕ್ಷಣದ ಕೆಲಸ ಎಂದಾದದರೆ, ಸಮಾಜಜೀವಿಗೆ ತಕ್ಕ ಗುಣಗಳನ್ನು ಪಾಠಶಾಲೆಯಲ್ಲಿಯೇ ಅಭ್ಯಾಸ ಮಾಡಬೇಕು. ನಾಳಿನ ಬಾಳು - ಬದುಕಿಗೆ ಅವರನ್ನು ತರಬೇತು ಮಾಡಬೇಕು. ರಾಜಕೀಯ, ನಾಗರಿಕ ಸಲ್ಲಕ್ಷಣಗಳನ್ನು ಬರೀ ಪುಸ್ತಕ ಪಾಠ ಮಾಡಿದರೆ ಸಾಲದು, ಶಾಲೆಯಲ್ಲಿರುವಾಗಲೇ ಅವರು ಅಭ್ಯಾಸ ಮಾಡಿಕೊಳ್ಳಬೇಕು. ನಾಳೆ ಪ್ರಜಾತಂತ್ರದ ಆಡಳಿತದಲ್ಲಿ ಭಾಗವಹಿಸಬೇಕು ಎಂದರೆ, ಅಲ್ಪವೋ ಸ್ವಲ್ಪವೋ ಶಿಸ್ತು, ಸ್ವರಾಜ್ಯಗಳ ಕಲೆಯನ್ನು ಈಗಲೇ ಕಲಿಯಬೇಕು. ಇತ್ತ ಪ್ರಜೆ, ಅತ್ತ ರಾಜ ಎರಡೂ ಆದ ಸ್ವತಂತ್ರ ನಾಗರಿಕನಿಗೆ ಯೋಗ್ಯವಾದ ಸ್ವಶಾಸನ ಪಾಲನೆ, ಪರಸ್ಪರ ಸಹಕಾರ ರೂಢಿಯಾಗುವಂತೆ ಬೆಳೆಸಬೇಕು. ವಿಶಾಲದೃಷ್ಟಿ, ಸಹನೆ, ನೆರೆಹೊರಿಕೆಗಳನ್ನು ಅವರು ಕಲಿಯಬೇಕು. ನ್ಯಾಯವಾದ ತನ್ನ ಹಕ್ಕುಗಳಿಗೆ ಹೊಡೆದಾಡಿದರೂ ತನಗೆ ಲಭಿಸಿದ ಪ್ರಗತಿಪರ ನಾಗರಿಕ ಸಮಾಜ ಜೀವನದ ಕಾರಣ, ತನ್ನ ಪಾಲಿಗೆ ಬಂದ ಕರ್ತವ್ಯಗಳನ್ನು ಶ್ರದ್ಧಾ ನಿಷ್ಠೆಗಳಿಂದ ನೆರವೇರಿಸಲು ಸಿದ್ಧನಾಗಿರಬೇಕು.

ಪಶ್ಚಿಮ ದೇಶಗಳಲ್ಲೆಲ್ಲಾ ವಿದ್ಯಾರ್ಥಿಯ ಈ ಗುಣ-ಪ್ರವೃತ್ತಿಯನ್ನು ಬೆಳೆಯಿಸುವ ಪ್ರಯತ್ನ ನಡೆಯುತ್ತವೆ. ಪಾಠಶಾಲೆಯಲ್ಲಿ ಒಂದು ರೀತಿಯ ಸಮಾಜ ಜೀವನದ ವ್ಯವಸ್ಥೆ, ಸ್ವ ಪರಿಪಾಲನೆಯ ಪ್ರಯತ್ನ ಇದೆ. ಯೂರೋಪಿಗಿಂತ ಅಮೆರಿಕಾದಲ್ಲಿ ಇದು ಮುಂದೆ ಸಾಗಿದೆ. ಸ್ವಪರಿಪಾಲನೆಯ ಬಗ್ಗೆ "ರಾಜಕೀಯ ನೀತಿ-ರಾಜಕೀಯ ಶಿಕ್ಷಣ ಶಾಸ್ತ್ರ' ದಲ್ಲಿ ಫಾರ್‌ಸ್ಟರ್ ಬರೆದಿದಾನೆ: 'ಚಿಕ್ಕಂದಿನಲ್ಲಿಯೇ ವಿಶ್ವಾಸಪಾತ್ರತೆ, ತಾವು ಆರಿಸಿದ ಪ್ರತಿನಿಧಿಗಳನ್ನು ನಿಷ್ಠೆಯಿಂದ ಅನುಸರಿಸುವುದು ಮುಂತಾದ ಜವಾಬದಾರಿಗಳನ್ನು ಶ್ರದ್ಧೆಯಿಂದ ಸ್ವತಂತ್ರವಾಗಿ ಮಕ್ಕಳು ಕಲಿತರೆ ತಾವು ಆಗ ರೂಪುಗೊಳಿಸಿದ ವಿಧಾನಗಳನ್ನು ಆಮೇಲೆ ಬಾಳಿನಲ್ಲಿ ಪ್ರವೇಶಗೊಳಿಸಲು ಅಗತ್ಯವಾದ ರಾಜಕೀಯ ಜಾಗೃತಿ, ರಾಜಕೀಯ ಸಾಹಚರ್ಯಗಳು ಅದರಿಂದ ಲಭಿಸುವಷ್ಟು ಮತ್ತಾವುದರಿಂದಲೂ ಲಭಿಸಲಾರವು."

ಆದರೆ ಶಾಲೆಗಳಿಲ್ಲಿ ಶಿಸ್ತು, ಸ್ವಪರಿಪಾಲನೆ ಕಳೆಗೆಟ್ಟು ಬರೀ ತೋರಿಕೆಯಾಗಿ ಲೋಕಸಭೆ, ವಿಧಾನಸಭೆಗಳ ಅಣಕವಾಗದಿರಲು ವಿದ್ಯಾರ್ಥಿಗಳು ಪರಿಹರಿಸಬೇಕಾದ ಕೆಲವಾದರೂ ಸಮಸ್ಯೆಗಳಿರಬೇಕು. ಪಾಠಶಾಲೆಯಲ್ಲಿಯೇ ಯಾವುದಾದರೊಂದು ಬಗೆಯ ಸುವ್ಯವಸ್ಥಿತ ಸಮಾಜವಿರಬೇಕು. ಪರಸ್ಪರ ಸಹಾಯ, ಸಹಕಾರಗಳಿಗೆ ಏನೂ ಅರ್ಥವಿಲ್ಲದಂತಾಗಬಾರದೆಂದರೆ ಪಾಠಶಾಲೆಯ ಈ ಸಮಾಜ ಯಾವುದಾದರೊಂದು ರಚನಾತ್ಮಕ ಕಾರ್ಯಕಲಾಪದಲ್ಲಿ ತೊಡಗಬೇಕು. ಪಾಠಶಾಲೆ

ಯಲ್ಲಿ ಒಂದು ಕಲೆಯನ್ನಾಗಲೀ, ಕೈಗಾರಿಕೆಯನ್ನಾಗಲೀ ಏರ್ಪಡಿಸುವುದು ಇದಕ್ಕೆ ಉತ್ತಮಮಾರ್ಗ. ರಚನಾತ್ಮಕ ಪರಿಶ್ರಮ ಸ್ವಪರಿಪಾಲನೆಯ ಮುಖ್ಯ ಸೂತ್ರ: ಸ್ವಪರಿಪಾಲನೆಯಲ್ಲಿ ಅದರ ಬೆಲೆಯೆಷ್ಟೆಂಬುದನ್ನು ಉತ್ಪ್ರೇಕ್ಷೆ ಮಾಡಲು ಸಾಧ್ಯವೇ ಇಲ್ಲ. ಇಲ್ಲಿ ಸ್ವರಾಜ್ಯ ತಲೆಯ ಮೇಲಿಟ್ಟ ಹೊರೆಯೂ ಅಲ್ಲ, ಹುಡುಗರು ಮಾಡಿದ ಅಣಕವೂ ಅಲ್ಲ. ವಿದ್ಯಾರ್ಥಿಗಳ ದಿನದಿನದ ಅವಶ್ಯಕತೆ, ಅಗತ್ಯ ಗಳಿಂದ ಮೂಡಿ ಬಂದುದು. ಪಾಠಶಾಲೆಯಲ್ಲಿಯ ಸಮಾಜ ಏತಕ್ಕಾಗಿ ಸಂಘಟಿತ ವಾಗಬೇಕೋ, ಶಿಸ್ತನ್ನು ಪಾಲಿಸಬೇಕೋ ಆ ಉದ್ದೇಶ ತಿಳಿಯದೆ, ಯೋಜನೆ ಯಿಲ್ಲದೆ ಯಾವ ಕೈಗಾರಿಕೆಯನ್ನೂ, ಕಲೆಯನ್ನೂ ಫಲಕಾರಿಯಾಗಿ ಕಲಿಸಲಾಗುವು ದಿಲ್ಲ. ವಾಂಛಿತ ಫಲವನ್ನು ಪಡೆಯಲು ವಿದ್ಯಾರ್ಥಿಗಳೂ, ಅಧ್ಯಾಪಕರೂ ಸಹಕರಿಸಬೇಕು. ಈ ದೃಷ್ಟಿಯಿಂದ ಪಾಠಶಾಲೆಗಳಲ್ಲಿ ಪ್ರಜಾತಂತ್ರದ ಸ್ವಪರಿ ಪಾಲನಗೆ ಅತ್ಯಂತ ಪ್ರೋತ್ಸಾಹ ಕೊಡುವುದು, ಶರೀರಶ್ರಮ ಕೈಗಾರಿಕೆ, ಅಧ್ಯಾಪಕರ ಅನುಭವಪೂರ್ಣ ನೇತೃತ್ವದಿಂದ ರಾಜಕೀಯ, ನಾಗರಿಕ ಸಲ್ಲಕ್ಷಣ ಗಳನ್ನು ಬೆಳೆಯಿಸಿಕೊಳ್ಳುವ ಅವಕಾಶವೂ ಇದರಲ್ಲುಂಟು.

ಪರಿಶ್ರಮ, ಶಾಲೆಯಲ್ಲಿ ರಾಜಕೀಯ. ನಾಗರೀಕ ಸದ್ಗುಣಗಳೇ ಅಲ್ಲ,ಆಧಾರಿತ ನೈತಿಕಗುಣಗಳೂ ಬೆಳೆಯುತ್ತವೆ. ಇಂದಿನ ಶಿಕ್ಷಣ ನೀತಿಯು ಮತಸಿದ್ಧಾಂತಗಳನ್ನೂ, ಶ್ರುತಿ ಪ್ರಮಾಣವನ್ನೂ ಅವಲಂಬಿಸದಿರಬಹುದು. ಅದು ವಿವಿಧ ಕರ್ಮರಂಗಗಳಲ್ಲಿ ಸಮಾಜಕ್ಕೆ ದೊರೆತ ವಿವೇಕ, ಅನುಭವಗಳನ್ನು ಅದರೆ ಆವಲಂಬಿಸಬೇಕು. ಅಂಥ ನೀತಿಗೆ ಬಾಹ್ಯವೇಷವೊಂದನ್ನು ತೊಡಿಸುವುದಾದರೆ, ಅದಕ್ಕೊಂದು ಸಂಸ್ಥೆ ಕಟ್ಟುವುದಾದರೆ ಈ ಕಾಲದ ಆರ್ಥಿಕ, ಸಾಮಾಜಿಕ, ರಾಜಕೀಯ ವಿಚಾರ-ಆದರ್ಶ ಗಳಿಗೂ, ಆಧುನಿಕ ವಿಜ್ಞಾನದ ತೀರ್ಮಾನಗಳಿಗೂ ಅನುಗುಣವಾಗಿರಬೇಕು. ಇಂದಿನ ವ್ಯಾಮಿಶ್ರ ಜಗತ್ತಿನಲ್ಲಿ ನಡೆದಿರುವ ಜೀವನ ಸಾಕಲ್ಯದಿಂದ ಇಂದಿನ ನೀತಿ ಯನ್ನು ಕಡಿದು ತುಂಡುಮಾಡಲು ಸಾಧ್ಯವಿಲ್ಲ. ಅಲ್ಲದೆ, ಜ್ಞಾನ ಪ್ರಗತಿಯಾ ದಂತೆ ನೀತಿಯೂ ಆಗಾಗ ಬದಲುತ್ತಲಿರಬೇಕು. ಸತ್ಯ, ನ್ಯಾಯ, ಅಹಿಂಸೆಯಂಥ ಮೂಲ ತತ್ವಗಳೇನೋ ಸ್ಥಿರವಾಗಿರಬೇಕು, ಅವೇ ಸಮಾಜ ವ್ಯವಸ್ಥೆಯ ಮೂಲ ಸೂತ್ರ. ಅವಿಲ್ಲದೆ ವ್ಯವಸ್ಥಿತ ಜೀವನವೇ ಅಸಂಭವ. ಆದರೆ ಈ ತತ್ವಗಳನ್ನು ಕಾಲಕಾಲಕ್ಕೆ ಬದಲಾಗುವ ಸಂಸ್ಥೆ, ಸಂಪ್ರದಾಯಗಳಲ್ಲಿ ಸದಾ ಪ್ರತಿಷ್ಠಿಸುತ್ತಲಿರ ಬೇಕು. ಗತಕಾಲದ ಐತಿಹಾಸಿಕ ಯುಗದ, ಇತಿಹಾಸ ಪೂರ್ವಯುಗದ ಸಂಪ್ರ ದಾಯ ಸಂಸ್ಥೆಗಳಿಗೆ ಅನುಗುಣವಾಗಿ ಇಂದಿನ ನೀತಿ ಸೂತ್ರಗಳನ್ನು ನಾವು ರಚಿಸ ಲಾಗದು. ದೇವರು ಲೋಕದ ತಂದೆ, ನಿಜವೋ ಊಹೆಯೋ-ಆತ ಮಾಡಿದ ಅಪ್ಪಣೆ ಇವು ಎಂದು ಅದರ ಮೇಲೆ ನೀತಿಯನ್ನು ಕಟ್ಟಲೂ ಆಗದು. ಮನುಷ್ಯ

ರೆಲ್ಲ ಅಣ್ಣ ತಮ್ಮಂದಿರೆಂಬ ವಾಸ್ತವ ಸತ್ಯದ, ಅದರ ಫಲವಾದ ಸಮತೆ-ಸ್ವಾತಂತ್ರ್ಯಗಳ ಮೇಲೆ ನಾವು ನೀತಿಯನ್ನು ಕಟ್ಟಬಹುದು. 'ಭಗವಂತನ ಅಪ್ಪಣೆ' ಎಂಬುದಲ್ಲ. ಇಂದಿನ ಸಾಧಾರಣ ಸ್ತ್ರೀ ಪುರುಷರ ಸೂತ್ರ. 'ತನ್ನಂತೆ ಪರರನ್ನು ಬಗೆ' ಎಂಬ ಚಿನ್ನದಂಥ ಮಾತು.

ಈ ಹೊಸ ನೀತಿಯನ್ನು ಜಾತಿ ವರ್ಗಗಳ ವ್ಯವಸ್ಥೆಯ ಮೇಲೆ ಕಟ್ಟಲು ಸಾಧ್ಯವಿಲ್ಲ. ದುಡಿಯುವ ಜನತೆ ಒಂದು ಕಡೆ, ಬಿಡುವಾದ ಸಂಸ್ಕೃತಿ ಸಂಪನ್ನ ವರ್ಗ ಒಂದು ಕಡೆ ಎಂಬ ಕಲ್ಪನೆಯ ಮೇಲೂ ಕಟ್ಟಲು ಸಾಧ್ಯವಿಲ್ಲ. ಮನುಷ್ಯರ ದುಡಿತದ ಸಹಕಾರದ ಮೇಲೆ ಕಟ್ಟಬೇಕು. ಜನ್ಮದಿಂದ, ಮತಸಂಪ್ರದಾಯದಿಂದ, ಏನೋ ವಿಶೇಷ ಅಧಿಕಾರ ಪಡೆವ ಬಯಕೆ ಇದರಲ್ಲಿ ಇರಲಾಗದು. ಸಹಕಾರಯುಕ್ತ ಪರಿಶ್ರಮದಲ್ಲಿ ಸತ್ಯ, ನ್ಯಾಯ, ಪ್ರೇಮ, ಶಾಂತಿ, ಶಿಷ್ಟಿಗಳು ಮೂಡುತ್ತವೆ ಯೆಂದು ಹಿಂದೆಯೇ ಹೇಳಿದೆ. ಸಹಕರಿಸುವವರಲ್ಲಿ ಈ ಗುಣಗಳಿಲ್ಲದಿದ್ದರೆ ಯಾವ ಸಹಕಾರಿ ಉದ್ಯಮವೂ ಸಫಲವಾಗದು. ಪ್ರೇಮ, ಅಹಿಂಸೆಗಳಿಲ್ಲದಿದ್ದರೆ ಆ ಉದ್ಯಮದಲ್ಲಿ ಸುಸಂಬದ್ಧ ಸಂಘಟನೆ, ಉದ್ದೇಶಪೂರ್ಣ ಸಹಕಾರ ಅಸಂಭವ. ಸಮಾಜದ ಹಿತಕ್ಕಾಗಿ ಉದ್ದೇಶಪೂರ್ವಕ ಮಾಡಿದ ಕೆಲಸದಿಂದ ಇನ್ನೂ ಅನೇಕ ವ್ಯಾವಹಾರಿಕವಾದ ವೈಯಕ್ತಿಕ ಸದ್ಗುಣಗಳು ಫಲಿಸುತ್ತವೆ. ಅದರಿಂದ ಬರುವ ಸಾಂಘಿಕತೆ, ದೇಶಭಕ್ತಿ, ಶೋಷಣೆಯನ್ನೂ, ನೆಲದ ಹಸಿವನ್ನೂ ಆಶ್ರಯಿಸವು; ಪ್ರ್ಯಾಮಿಶ್ರ ಸಮಾಜದ ನಾನಾ ಕಾರ್ಯಕ್ಷೇತ್ರಗಳಲ್ಲಿ ಕೆಲಸಗಾರರ ಸಂಘಟನೆಯ ರೂಪವನ್ನು ತಳೆಯುತ್ತವೆ. ಕೆಲಸಗಾರರ ಸಮಾಜಕ್ಕೆ ಪರಸ್ಪರರ ಶೋಷಣೆಯಲ್ಲಿ ಆಸಕ್ತಿಯಿರದು. ಇದೆಲ್ಲದರ ಫಲವಾಗಿ ಧಾರ್ಮಿಕ ಸಿದ್ಧಾಂತ, ಸಂಪ್ರದಾಯಗಳ ಅಂಧಶ್ರದ್ಧೆಯಿಂದ ಮುಕ್ತವಾದ ವಿವೇಕಪೂರ್ಣ, ಯುಕ್ತ್ಯಾಯುಕ್ತ ನೈತಿಕತೆ ಪ್ರಭವಿಸುತ್ತದೆ.

ಆದುದರಿಂದಲೇ ಕೆಲಸದ ಮೂಲಕ, ಅಧ್ಯಾಪಕನ ಜೀವನದ ಮೂಲಕ ನೀತಿಶಿಕ್ಷಣ ಬರಬೇಕೆಂಬುದನ್ನು ಒತ್ತಿ ಹೇಳಿದರೂ ಗಾಂಧೀಜಿಯ ಯೋಜನೆ ಯಲ್ಲಿ ಯಾವ ಮತ-ಪಂಥದ ಶಿಕ್ಷಣವೂ ಇಲ್ಲ. ರಷ್ಯಾದಂತೆ ಇದು ಅಧಾರ್ಮಿಕವೂ ಅಲ್ಲ, ನಾಸ್ತಿಕವೂ ಅಲ್ಲ. ಧರ್ಮದ ವಿಷಯದಲ್ಲಿ ವಿದ್ಯಾರ್ಥಿಗಳಿಗೂ ಅವರ ಹಿರಿಯರಿಗೂ ಇದರಲ್ಲಿ ಸಂಪೂರ್ಣ ಸ್ವಾತಂತ್ರ್ಯ. ತಮಗಿಷ್ಟವಾದ ಮತಧರ್ಮದ ಶಿಕ್ಷಣವನ್ನು ತಂದೆತಾಯಿಗಳು ತಮ್ಮ ಹುಡುಗರಿಗೆ ಕೊಡಬಹುದು. ರಾಜ್ಯ ಯಾವ ಮತಪಂಥದ್ದೂ ಅಲ್ಲ, ಎಲ್ಲರದೂ. ಎಂತಲೇ ಈ ಬಹಳ ತೊಡಕಿನ, ಅತಿ ಸೂಕ್ಷ್ಮ, ಪ್ರಧಾನವಾಗಿ ಅಂತರಂಗಿನ ಕ್ರಿಯೆ ಆದ ಇದನ್ನು ವ್ಯಕ್ತಿಯ ಸ್ವೇಚ್ಛೆಗೆ ವಿವೇಕದಿಂದ ಬಿಡುತ್ತದೆ. ಇದರಿಂದಾಗಿ ವ್ಯಕ್ತಿಗೆ ಆಧ್ಯಾತ್ಮಿಕ

ವಿಚಾರ ದೀಪ್ತಿ................

ಮಹಿಳೆಯರಿಗೂ ಪುರುಷರಂತೆ ಸನ್ಯಾಸ ದೀಕ್ಷೆ ನೀಡುವುದು ಸ್ತ್ರೀ ಸಮಾನತೆಯೇ? ಮಹಿಳೆಯರಿಗೆ ಸನ್ಯಾಸ ಬೇಕೆ ಅಥವಾ ಸಂಸಾರ ಬೇಕೆ?

ತಮ್ಮ ಮಠದಲ್ಲಿ ಮಹಿಳೆಯರಿಗೆ ಸನ್ಯಾಸದೀಕ್ಷೆ ಕೊಟ್ಟು ಸಮಾನತೆ ಕಲ್ಪಿಸಲಾಗಿದೆ ಎಂದು ಸ್ವಾಮೀಜಿಯವರು ಹೇಳಿದ್ದಾರೆ. ಆದರೆ ಆದೇನು ಮಹಾದೊಡ್ಡ ಕೆಲಸ? ನಮಗೆ ಮಠಾಧೀಶರು ಬೇಕಿಲ್ಲ. ಮಠಗಳಲ್ಲಿರುವಷ್ಟು ರಾಜಕೀಯ ಎಲ್ಲಿಯೂ ಇಲ್ಲ. ಅವರು ಗುರುಗಳಾಗಿ ಮಾಡುವ ವ್ಯವಹಾರ ಬೇಕಿಲ್ಲ. ಹೆಣ್ಣಿಗೆ ಸನ್ಯಾಸ ಬೇಕಿಲ್ಲ. ಅವಳಿಗೆ ಸಂಸಾರದ ಬದುಕಿನಲ್ಲಿಯೇ ನೆಮ್ಮದಿ. ವಂಶೋದ್ಧಾರಕರು ಗಂಡು ಮಕ್ಕಳಲ್ಲ. ಈಗಿನ ಗಂಡು ಮಕ್ಕಳು ವಯಸ್ಸಾದ ಅಪ್ಪ-ಅಮ್ಮನ್ನ ಸಾಕುವುದಕ್ಕೆ ತಯಾರಿಲ್ಲ. ಏನಿದ್ದರೂ ಮನೆ ದೀಪ ಬೆಳಗುವವರು ಹೆಣ್ಣುಮಕ್ಕಳು.

ಮಹಿಳೆಯರು ಅವಶ್ಯಕತೆ ಇದ್ದರೆ ಮಾತ್ರ ಆಸ್ತಿ ಹಕ್ಕು ಕೇಳಬೇಕು. ಇಲ್ಲದಿದ್ದರೆ ವರದಕ್ಷಿಣೆಯಂತೆ ಅದಕ್ಕೂ ಕಿರುಕುಳ ಶುರು, ಗಂಡನ ಮಡಿಮೆ ಸಾಕು. ಗಂಡನ ಆಸ್ತಿಯಲ್ಲಿ ಹೆಂಡತಿಗೂ ಹಕ್ಕಿದೆಯಲ್ಲ.

– ಟಿ. ಗಿರಿಜಾ

ಜೀವನ ಶಿಕ್ಷಣ....

ವಿವೇಚನೆ ಸಿಗುತ್ತದೆ. ತತ್ ಪರಿಣಾಮವಾಗಿ ಪರಸ್ಪರ ಶುಭಾಶಯ, ಸಹನೆಗಳಿಗೆ ಬಲ ಕೊಡುತ್ತದೆ. ಮತಾಂಧತೆಗೆ ಮನ್ನಣೆ ಅಳಿಯುತ್ತದೆ. ಮತಧರ್ಮ ವ್ಯಕ್ತಿಯ ಅಂತರಂಗದ ವಿಷಯ. ಸೃಷ್ಟಿಕರ್ತನಲ್ಲಿ ಅವನಿಗೆ ನಂಬಿಕೆ ಯಿದ್ದರೆ, ತನಗೂ ತನ್ನ ಆಂತರಿಕ, ಗಾಢ, ಪ್ರಜ್ಞಾಮಯ ಸ್ವಭಾವಕ್ಕೂ ಏನು ಸಂಬಂಧವೆಂಬುದನ್ನು ನಿರ್ಧರಿಸಲು ವ್ಯಕ್ತಿ ಪೂರ್ಣ ಸ್ವತಂತ್ರ. ★

KA-SK-MND-470/2000 ತೆರೆದ-ಅಂಚೆ

Vol 1 Issue 9.

Janapada Vichara – Kannada Monthly Digest Edited and Printed by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote, Dist – Mandya 571 431.

Phone : 08236/58754